ದೆಹಲಿ ಕರ್ನಾಟಕ ಸಂಘದ

# ಅಭಿಮತ

ಮೇ 2015
ಬೆಲೆ ರೂ. 1



## ಸೇವಂತಿ ಪ್ರಸಂಗ

ದೆಹಲಿ ಕನ್ನಡ ರಂಗಭೂಮಿಯ ಮಹತ್ವದ ಪ್ರಯೋಗ

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 25 ಸಂಚಿಕೆ 8
ಮೇ 2015, ಬೆಲೆ ರೂ. 1

**ಅಭಿಮತ ಸಂಪಾದಕ ಮಂಡಳಿ**

ಬಾಲಕೃಷ್ಣ ನಾಯ್ಕ್ ಡಿ.
ಸವಿತಾ ಇನಾಮದಾರ್
ಪ್ರಕಾಶ್ ಶೆಟ್ಟಿ ಉಳೆಪಾಡಿ
ಆಶಾಲತಾ ಎಂ.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಬಸವರಾಜು ಬಿ.ಕೆ.: 9810391608
ಆಶಾಲತಾ ಎಂ.: 9891249149

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ: 9811325440

**ಕೋಶಾಧಿಕಾರಿ**
ಡಾ. ಅವನೀಂದ್ರನಾಥ್ ರಾವ್ 9868123382

**ಜಂಟಿ ಕಾರ್ಯದರ್ಶಿಗಳು**
ಎಸ್.ಸಿ. ಹೇಮಲತ: 9971121636
ಟಿ.ಎಂ. ಮೈಲಾರಪ್ಪ: 9013210175

**ಸಮಿತಿ ಸದಸ್ಯರು**
ಆಂಜನಿ ಗೌಡ: 9811653354
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಪಿ.ಸಿ.ಶ್ರೀನಿವಾಸ್: 9868170790
ಆನಂದ ಮುರಗೋಡ: 9312931233
ಆಶಾ ಶ್ಯಾಮಸುಂದರ್: 9871256177
ಬಸವರಾಜ ಮೇಟಿ: 9810282951
ಟಿ.ಪಿ. ಬೆಳ್ಳಿಯಪ್ಪ: 9654555795
ಕುಸುಮಾ ಪಿ. ನಂದರಗಿ 9868393955

**ವಿಶೇಷ ಆಹ್ವಾನಿತರು**
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ

## ನೇರ ಮಾತು

ಕಳೆದ ಸುಮಾರು ಹತ್ತು ವರ್ಷಗಳಿಂದ, ಅಂದರೆ ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯ ಉದ್ಘಾಟನೆಗೊಂಡ ಆನಂತರ, ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆಗಳಿಗಾಗಿ (ಐ.ಎ.ಎಸ್/ ಐ.ಆರ್.ಎಸ್. ಇತ್ಯಾದಿ) ತರಬೇತಿ ಪಡೆಯಲು ದೆಹಲಿಗೆ ಬರುವ ಕನ್ನಡದ ವಿದ್ಯಾರ್ಥಿಗಳಿಗೆ ದೆಹಲಿ ಕರ್ನಾಟಕ ಸಂಘ ತನ್ನಿಂದ ಸಾಧ್ಯವಾದ ಸಹಾಯ, ಸಹಕಾರ, ಮಾರ್ಗದರ್ಶನ ಮಾಡುವ ಪ್ರಯತ್ನ ಮಾಡುತ್ತಿದೆ. ದೆಹಲಿಗೆ ಬರುವ ವಿದ್ಯಾರ್ಥಿಗಳಿಗೆ ಆರಂಭದಲ್ಲೆ ಎದುರಾಗುವ ಸಮಸ್ಯೆ ವಸತಿ, ಹೀಗಾಗಿ ಮುಖ್ಯವಾಗಿ ವಿದ್ಯಾರ್ಥಿನಿಯರು ದೆಹಲಿಗೆ ಬರಲು ಹಿಂದೇಟು ಹಾಕುತ್ತಾರೆ ಅಥವಾ ಪೋಷಕರು ಕಳುಹಿಸಿಕೊಡಲು ಒಪ್ಪುವುದಿಲ್ಲ. ಹೀಗಾಗಿ ಬಹಳಷ್ಟು ವಿದ್ಯಾರ್ಥಿನಿಯರು ಐ.ಎ.ಎಸ್. ಆಗುವ ಅವಕಾಶದಿಂದ ವಂಚಿತರಾಗುತ್ತಿದ್ದಾರೆ. ಕಳೆದ ಹತ್ತು ವರ್ಷಗಳಲ್ಲಿ ದೆಹಲಿಗೆ ಬಂದ ವಿದ್ಯಾರ್ಥಿಗಳೊಂದಿಗೆ ಆತ್ಮೀಯವಾಗಿ ಸ್ಪಂದಿಸಿದ ದೆಹಲಿ ಕರ್ನಾಟಕ ಸಂಘದ ಪ್ರಯತ್ನದಿಂದಾಗಿ ದೆಹಲಿಗೆ ಕೋಚಿಂಗ್‌ಗೆ ಬರುವವರ ಸಂಖ್ಯೆ ಹೆಚ್ಚಾಗಿದೆ. ಇದೀಗ ದೆಹಲಿಯಲ್ಲೂ 'ನಮ್ಮ ಮನೆ' (ಕರ್ನಾಟಕ ಸಂಘ)ಯೊಂದು ಇದೆ ಎನ್ನುವ ಮಾಹಿತಿ ಕನ್ನಡದ ಆಸಕ್ತ ವಿದ್ಯಾರ್ಥಿಗಳ ಪೋಷಕರಿಗೆ ಧೈರ್ಯ ತಂದುಕೊಟ್ಟಿದೆ.

ಇದೀಗ ಸಂಘಕ್ಕೆ ನೂರಾರು ದೂರವಾಣಿ ಕರೆಗಳು ಬರುತ್ತಿರುವುದು ಇದಕ್ಕೊಂದು ನಿದರ್ಶನ. ನನ್ನ ಮಗಳು ಬರುತ್ತಿದ್ದಾಳೆ... ಮಗ ಬರುತ್ತಿದ್ದಾನೆ... ನೀವೆಲ್ಲ ಇದ್ದೀರಿ... ಸ್ವಲ್ಪ ನೋಡಿಕೊಳ್ಳಿ... ಸಂಘಕ್ಕೆ ಬಂದಾಗ ನಮ್ಮ ಮನೆಯಲ್ಲಿ ಇದ್ದಹಾಗೆ ಅನಿಸಿತು... ಇತ್ಯಾದಿ... ಇತ್ಯಾದಿ...

ದೆಹಲಿ ಕರ್ನಾಟಕ ಸಂಘ ಕನ್ನಡಿಗರ ಒಂದು 'ಆಧಾರ ಸ್ತಂಭ'ವಾಗಿ ಈ ಪ್ರಯತ್ನ ಮಾಡಿದೆಯಾದರೂ ಕನ್ನಡದ ವಿದ್ಯಾರ್ಥಿಗಳಿಗೆ ರಾಜಧಾನಿ ದೆಹಲಿಯಲ್ಲಿ ಮುತುವರ್ಜಿವಹಿಸಿ ದೆಹಲಿ ಕರ್ನಾಟಕ ಸಂಘದ ಸಹಕಾರದೊಂದಿಗೆ ಅವರ ಬೇಕುಗಳಿಗೆ ಸ್ಪಂದಿಸಲು ಪ್ರಯತ್ನಿಸಿದ ಕೀರ್ತಿ 'ಕೃಷಿಕ್ ಸರ್ವೋದಯ ಫೌಂಡೇಶನ್'ಗೆ ಸಲ್ಲಬೇಕು. ಕೋಚಿಂಗ್ ಸೆಂಟರ್‌ನ ಆಯ್ಕೆ, ಅಧ್ಯಯನ ವಿಷಯದ ಆಯ್ಕೆ, ಕನ್ನಡ ಐ.ಎ.ಎಸ್. ಅಧಿಕಾರಿಗಳಿಂದ ತರಬೇತಿ– ಈ ಎಲ್ಲವನ್ನೂ ವ್ಯವಸ್ಥಿತವಾಗಿ ಮಾಡುವ ಪ್ರಯತ್ನವನ್ನು ಅದು ಮಾಡುತ್ತಿದೆ. ಇದರಲ್ಲಿ ಮುಖ್ಯವಾಗಿ ಡಾ. ವಿ.ಆರ್. ಗುಡ್ಡೇಗೌಡ, ಎನ್.ಎ. ಮಾಧವ, ಕೆ.ಎಸ್. ಶಿವರಾಮು, ಡಾ. ಪುರುಷೋತ್ತಮ ಬಿಳಿಮಲೆ, ಡಾ. ಎಂ.ಜೆ. ಚಂದ್ರೇಗೌಡ ಮತ್ತು ಕಾರ್ಯಕಾರಿ ಸಮಿತಿ ಸದಸ್ಯ ಪಿ.ಸಿ. ಶ್ರೀನಿವಾಸ ಮೊದಲಾದವರ ಕೊಡುಗೆ ಮಹತ್ತರವಾದದ್ದು.

ನೂರಾರು ಕನ್ನಡಿಗರು ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳು ಆಗಬೇಕು ಎಂದು ಕನಸು ಕಾಣುತ್ತಿದ್ದಾರೆ, ಈ ಕನಸು ಸಾಕಾರಗೊಳ್ಳುವಲ್ಲಿ ಇರುವ ದೊಡ್ಡ ತೊಡಕೆಂದರೆ, ರಾಜಧಾನಿಯಲ್ಲಿ ದೊರೆಯದಿರುವ ವಸತಿ ವ್ಯವಸ್ಥೆ ಮತ್ತು ನಮ್ಮದೇ ಆದ ತರಬೇತಿ ಕೇಂದ್ರ ಇಲ್ಲದಿರುವುದು. ಇದೆಲ್ಲವನ್ನು ಮನಗಂಡ ಸಂಘದ ಈಗಿನ ಆಡಳಿತ ವರ್ಗ ಸಂಘದ ಹತ್ತಿರದಲ್ಲೇ ಇರುವ ಗುರ್‌ಗಾಂವ್‌ನಲ್ಲಿ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕೇಂದ್ರವೊಂದನ್ನು ಆರಂಭಿಸಬೇಕೆನ್ನುವ ಹಂಬಲ ಹೊಂದಿದೆ. ದೆಹಲಿಯ ಎಲ್ಲಾ ಕನ್ನಡ ಸಂಘ ಸಂಸ್ಥೆಗಳು ಹಾಗೂ ಕನ್ನಡದ ಮನಸ್ಸುಗಳು ಒಂದಾಗಿ ಪ್ರಯತ್ನ ಮಾಡಿದರೆ ಇದನ್ನು ಸಾಧಿಸುವುದು ಕಷ್ಟವೇನಲ್ಲ. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ಮುನ್ನೋಟ

ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ದೇಶದ ರಾಜಧಾನಿ ದೆಹಲಿಯಲ್ಲಿ ಉಳಿಸಿ ಬೆಳೆಸಲು ದೆಹಲಿ ಕರ್ನಾಟಕ ಸಂಘವು ಈ ಸಾಲಿನಲ್ಲಿ ಇದುವರೆಗೆ ಸುಮಾರು 60ಕ್ಕಿಂತಲೂ ಹೆಚ್ಚು ಕಾರ್ಯಕ್ರಮಗಳನ್ನು ಮಾಡಿದೆ. ಪ್ರತಿ ವಾರಾಂತ್ಯಗಳಲ್ಲಿ ಅಲ್ಲದೆ ಇತರ ದಿನಗಳಲ್ಲೂ ಸಂಘದ ಸಭಾಂಗಣವು ಕನ್ನಡಿಗರಿಂದ ತುಂಬಿ ಸಂಘದ ಪರಿಸರದಲ್ಲಿ ಕನ್ನಡದ ಕಂಪು ಹರಡುತ್ತಿದೆ.

ಮೇ ತಿಂಗಳು ಆರಂಭವಾದಂತೆ ದೆಹಲಿಯಲ್ಲಿ ಬಿಸಿಲಿನ ಬೇಗೆಯೂ ಹೆಚ್ಚುತ್ತಿದೆ. ಸಂಘದ ಅನೇಕ ಸದಸ್ಯರು ಕುಟುಂಬ ಸಮೇತ ತವರೂರಿನತ್ತ ಪ್ರಯಾಣ ಬೆಳೆಸುತ್ತಿದ್ದಾರೆ. ಆದರೂ ಸಂಗೀತ ಸಂಭ್ರಮ ಮತ್ತು ಕೊಡವ–ಅರೆ ಭಾಷೆಗಳ ಸಂಭ್ರಮವನ್ನು ಮೇ ತಿಂಗಳಲ್ಲಿ ಆಯೋಜಿಸಿ ಕನ್ನಡ ಚಟುವಟಿಕೆಯನ್ನು ನಿರಂತರಗೊಳಿಸಲಾಗಿದೆ.

ದೆಹಲಿಯ ಸ್ಥಳೀಯ ಕನ್ನಡ ರಂಗಾಸಕ್ತರು ರಂಗಾಯಣದ ಮಂಜುನಾಥ ಬೆಳಕೆರೆಯವರಿಂದ ತರಬೇತಿ ಪಡೆದು ತಯಾರಾದ ನಾಟಕ 'ಸೇವಂತಿ ಪ್ರಸಂಗ' ದೆಹಲಿಯ ಪ್ರೇಕ್ಷಕರನ್ನು ಮೆಚ್ಚಿಸಿದೆ. ದೆಹಲಿ ಕನ್ನಡಿಗರ ಪ್ರತಿಭೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಈ ನಾಟಕದ ಎರಡು ಪ್ರದರ್ಶನಗಳು ಮೈಸೂರು ಮತ್ತು ಬೆಂಗಳೂರಿನಲ್ಲಿ ನಡೆಯಲಿವೆ. ದೆಹಲಿಯಲ್ಲಿದ್ದು ನಾಡಿಗೆ ಮರಳಿದ ಕನ್ನಡಿಗರಲ್ಲದೇ, ಈಗ ಬೇಸಿಗೆ ರಜೆಯಲ್ಲಿ ಊರಿನಲ್ಲಿರುವ ಸಂಘದ ಸದಸ್ಯರೂ ಈ ನಾಟಕವನ್ನು ಜೂನ್ 20 ಮತ್ತು 21ರಂದು ನೋಡಬಹುದು. ಅ

***ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ***

## ದೆಹಲಿ ಕರ್ನಾಟಕ ಸಂಘದಲ್ಲಿ
# ತಿಂಗಳ ಕಾರ್ಯಕ್ರಮ

## ದಶಮಾನೋತ್ಸವ ವಿಶೇಷ ಕಾರ್ಯಕ್ರಮ

**11 ರಿಂದ 16 ಮೇ 2015** **ಸಂಗೀತ ತರಬೇತಿ**

ರಾಮಚಂದ್ರ ಹಡಪದ್ ಅವರಿಂದ

**16 ಮೇ 2015** **ಶನಿವಾರ ಸಂಜೆ 5.30 ಗಂಟೆಗೆ**

**ಸಂಗೀತ ಸಂಭ್ರಮ:** ಸಂಗೀತ ತರಬೇತಿ ಪಡೆದ ದೆಹಲಿ ಕರ್ನಾಟಕ ಸಂಘದ ಸದಸ್ಯರು ಮತ್ತು ರಾಮಚಂದ್ರ ಹಡಪದ್ ಅವರಿಂದ

## ಕೊಡವ-ಅರೆ ಭಾಷೆಗಳ ಸಂಭ್ರಮ

**17 ಮೇ 2015** **ಶನಿವಾರ ಸಂಜೆ 2.00 ರಿಂದ**

ಕೊಡವ-ಅರೆ ಭಾಷೆಗಳ ಸಂಭ್ರಮ. ಅಧ್ಯಕ್ಷತೆ-ಶ್ರೀ ಎನ್.ಎ. ಮಾಧವ, ಅಧ್ಯಕ್ಷರು, ಕೃಷಿಕ್ ಸರ್ವೋದಯ ಫೌಂಡೇಶನ್, ದೆಹಲಿ ಶಾಖೆ, ಉಪಸ್ಥಿತಿ-ಶ್ರೀ ಎಂ. ಕಾರ್ಯಪ್ಪ ಅಪ್ಪಯ್ಯ, ಅಧ್ಯಕ್ಷರು, ಕೊಡವ ಸಮಾಜ, ನವದೆಹಲಿ.

ರಂಗಭೂಮಿ (ರಿ) ಕೊಡಗು ಪ್ರಸ್ತುತ ಪಡಿಸುವ ನಾಟಕ **ಬದ್‌ಕ್,** ರಚನೆ : ಅಡ್ಡಂಡ ಕಾರ್ಯಪ್ಪ, ನಿರ್ದೇಶನ : ಮಾಲತೇಶ್ ಬಡಿಗೇರ.

ಕಾವೇರಿ ಆರ್ಟ್ ಸ್ಕೂಲ್ ಪ್ರಸ್ತುತಪಡಿಸುವ ನೃತ್ಯರೂಪಕ, ಕೋಲಾಟ, ಜಾನಪದ ನೃತ್ಯ, Hiphop ಮತ್ತು ಹುಲಿ ನೃತ್ಯ ಇತ್ಯಾದಿ ವೈವಿಧ್ಯಮಯ ಕಾರ್ಯಕ್ರಮಗಳು

ದೆಹಲಿ ಕೊಡವ ಸಮಾಜದ ಕಲಾವಿದರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು

## ಸೇವಂತಿ ಪ್ರಸಂಗ-ಮೈಸೂರು, ಬೆಂಗಳೂರಿನಲ್ಲಿ

ಜೂನ್ 20ರಂದು ರಂಗಾಯಣ ಮೈಸೂರಿನ ಭೂಮಿಗೀತ ರಂಗಮಂದಿರದಲ್ಲಿ

ಜೂನ್ 21ರಂದು ಬೆಂಗಳೂರಿನಲ್ಲಿ

ಹೆಚ್ಚಿನ ಮಾಹಿತಿ (ಬೆಂಗಳೂರು)
ಶ್ರೀ ಟಿ.ಎಸ್. ರಮೇಶ್ : 0-9880188467
ಶ್ರೀಮತಿ ಉಷಾ ಭರತಾದ್ರಿ : 0-9535054377

## ಸಂಘದಲ್ಲಿ ಇತರ ಸಂಘ ಸಂಸ್ಥೆಗಳ ಕಾರ್ಯಕ್ರಮ

**11 ಜುಲೈ 2015** **ಶನಿವಾರ ಸಂಜೆ 9.30 ಗಂಟೆಗೆ**

ದೆಹಲಿಯಲ್ಲಿ ಮೊದಲ ಬಾರಿಗೆ ಇಡೀ ರಾತ್ರಿ ಯಕ್ಷಗಾನ ಪ್ರದರ್ಶನ
ತೆಂಕು ತಿಟ್ಟಿನ ಪ್ರಖ್ಯಾತ ಕಲಾವಿದರ ಕೂಡುವಿಕೆಯಿಂದ
**ಸಂಪೂರ್ಣ ಶ್ರೀದೇವೀ ಮಹಾತ್ಮೆ**
ಎರಡನೇ ಶನಿವಾರ, ಜುಲೈ 11, 2015ರಂದು
ರಾತ್ರಿ 9.30ರಿಂದ ಮರುದಿನ ಮುಂಜಾನೆ 6.00ಗಂಟೆವರೆಗೆ

## ಕನ್ನಡ ತರಗತಿಗಳು

ದೆಹಲಿ ಕರ್ನಾಟಕ ಸಂಘದಲ್ಲಿ ಕನ್ನಡ ತರಗತಿಗಳನ್ನು ಪ್ರತಿ ಶನಿವಾರ ಮತ್ತು ಭಾನುವಾರದಂದು ಆರಂಭಿಸಲಾಗಿದೆ. ಕನ್ನಡ ಕಲಿಯಲಿಚ್ಛಿಸುವವರು ತಮ್ಮ ಹೆಸರನ್ನು ಸಂಘದಲ್ಲಿ ನೊಂದಾಯಿಸಬೇಕಾಗಿ ವಿನಂತಿ.

## ಸಂಘದ ಗುರುತು ಚೀಟಿ

ದೆಹಲಿ ಕರ್ನಾಟಕ ಸಂಘದ ಸದಸ್ಯರಿಗೆ (ದೆಹಲಿ ಮತ್ತು ಎನ್.ಸಿ.ಆರ್. ನಲ್ಲಿರುವವರಿಗೆ ಮಾತ್ರ) ಐಡೆಂಟಿಟಿ ಕಾರ್ಡ್‌ನ್ನು ನೀಡುವ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ. ಸದಸ್ಯರು ತಮ್ಮ ವಿಳಾಸ, ದೂರವಾಣಿಗಳು ಬದಲಾಗಿದ್ದಲ್ಲಿ ಕೂಡಲೇ ಲಿಖಿತ ಮೂಲಕ ಸಂಘದ ಕಾರ್ಯಾಲಯಕ್ಕೆ ತಿಳಿಸಬೇಕಾಗಿ ವಿನಂತಿ. ಜತೆಗೆ ಇತ್ತೀಚಿನ ಭಾವಚಿತ್ರವನ್ನು ಕಳುಹಿಸಿರಿ.

*ಪ್ರಧಾನ ಕಾರ್ಯದರ್ಶಿ*

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 17 ಮೇ, 2015ರಂದು ಬೆಳಿಗ್ಗೆ 10 ಗಂಟೆಯಿಂದ.


**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 17 ಮೇ, 2015ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 31 ಮೇ, 2015 ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್** M.D. (AYU) ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 31 ಮೇ, 2015 ರಂದು ಸಾಯಂಕಾಲ 4 ಗಂಟೆಯಿಂದ.

**ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ.**
**ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848585 – 011-26109615, 26104818**

# ಬೆಂಗಳೂರು ಕಲಾವಿದರ ಚಿತ್ರಕಲಾ ಪ್ರದರ್ಶನ













ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಬೆಂಗಳೂರಿನ ನಾಲ್ಕು ಕಲಾವಿದರ ಚಿತ್ರಕಲಾ ಪ್ರದರ್ಶನವನ್ನು ಶ್ರೀಮತಿ ರಾಣಿ ಸತೀಶ್ ಅವರು ಇದೇ ಎಪ್ರಿಲ್ 8ರಂದು ದೀಪ ಬೆಳಗಿಸಿ ಉದ್ಘಾಟಿಸಿದರು .

ಬೆಂಗಳೂರಿನವರಾದ ಚಿತ್ರಾ ಎನ್., ಜಯ ಪ್ರಕಾಶ್ ಎಸ್.ಬಿ., ಕೆ.ಜಿ. ಲಿಂಗದೇವರು ಹಾಗೂ ಡಾ. ಮೀರಾ ಕುಮಾರ್ ಅವರ ಆಯ್ದ ಕೃತಿಗಳನ್ನು ದೆಹಲಿಯಲ್ಲಿ ಪ್ರದರ್ಶಿಸಲಾಯಿತು. ಶ್ರೀಮತಿ ರಾಣಿ ಸತೀಶ್ ಅವರು ಈ ಕಲಾವಿದರ ಚಿತ್ರಕಲೆಯು ವಿಶ್ವಾದ್ಯಂತ ಪ್ರಚಾರಗೊಂಡು ಅವರು ಖ್ಯಾತರಾಗಲಿ ಎಂದು ಶುಭ ಹಾರೈಸಿದರು.

ನಾಲ್ವರು ಕಲಾವಿದರ ಕೃತಿಗಳೂ ವಿಭಿನ್ನವಾಗಿದ್ದು ಅವರವರದೇ ಆದ ವಿಶಿಷ್ಟ ಶೈಲಿಯಲ್ಲಿ ರಚಿತಗೊಂಡಿವೆ. ಚಿತ್ರಾ ಎನ್. ಅವರ ಆಧುನಿಕ ಶೈಲಿಯಲ್ಲಿನ ವರ್ಣರಂಜಿತ ಸಿಟಿ ಸ್ಕೇಪ್ ಆಕರ್ಷಿಸಿದರೆ, ಉತ್ತಮ ಛಾಯಾ ಚಿತ್ರವನ್ನು ಅಲ್ಪ ಪರಿವರ್ತಿಸಿ ಬಣ್ಣ ಕುಂಚದ ಪ್ರಯೋಗದಿಂದ ಸುಂದರ ಕಲಾಕೃತಿಯನ್ನಾಗಿಸುವ ಜಯ ಪ್ರಕಾಶ್ ಎಸ್. ಬಿ. ಅವರ ಶೈಲಿ ವಿಭಿನ್ನವಾಗಿದೆ. ಕೆ.ಜಿ. ಲಿಂಗದೇವರು ಅವರು ಮಾನವನ ಆಂತರಿಕ ಹಾಗೂ ಬಾಹ್ಯ ಭಾವನೆಗಳನ್ನು ವಿವಿಧ ಬಣ್ಣದ ಮೂಲಕ ತಮ್ಮ ಕೃತಿಗಳಲ್ಲಿ ವ್ಯಕ್ತ ಪಡಿಸಿದ್ದಾರೆ. ಪಾರಂಪರಿಕ ಮೈಸೂರಿನ ಶೈಲಿಯಲ್ಲಿನ ಡಾ. ಮೀರಾ ಕುಮಾರ್ ಅವರ ಕಲಾಕೃತಿಗಳಂತೂ ಚಿತ್ತಾಕರ್ಷಕ ವಾಗಿವೆ. ಇವರ ನಾಗಭೂಷಣ ಸಂಧ್ಯಾವಂದನ ಗಣಪತಿ ಬಹು ಜನರ ಮನಸ್ಸಿನಲ್ಲಿ ನಿಲ್ಲುವಂತಹ ಕೃತಿಯಾಗಿದೆ .

ಉದ್ಘಾಟನಾ ಸಮಾರಂಭದಲ್ಲಿ ಕಲಾವಿದರಾದ ಭೀಮರಾವ್ ಮುರುಗೋಡ್, ಶಾಲನ್ ಮುರುಗೋಡ್, ಚೆನ್ನು ಎಸ್ ಮಠದ, ಸುಧೀರ್ ಫಡ್ನಿಸ್, ಹಾಗೂ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷ ಶ್ರೀ ಬಿ.ಕೆ. ಬಸವರಾಜು, ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಟಿ.ಪಿ. ಬೆಳ್ಳಿಯಪ್ಪ ಮತ್ತು ಹಿರಿಯ ಸದಸ್ಯ ಶ್ರೀ ಕೆ.ಎಸ್.ಜಿ ಶೆಟ್ಟಿ ಇನ್ನಿತರರು ಉಪಸ್ಥಿತರಿದ್ದರು. ಅ

***ಚೆನ್ನು ಎಸ್ ಮಠದ***

# ಗುರುಗಾಂವ್‌ನಲ್ಲಿ ಯುಗಾದಿ
# ಸಾಂಸ್ಕೃತಿಕ ಮಿಲನ



ನಾವು ಎಲ್ಲಿಗೆ ಹೋದರೂ ನಮ್ಮತನವನ್ನು ಬಿಡದೆ ನಮ್ಮ ದೇಶದೊಳಗಿರುವ ಭಿನ್ನತೆಯಲ್ಲಿ ಏಕತೆಯನ್ನು ಕಂಡು ಎಲ್ಲರೂ ಸೌಹಾರ್ದದಿಂದ ಒಂದೇ ತಾಯಿಯ ಮಕ್ಕಳಂತೆ ಬಾಳಬೇಕು ಎಂದು ಗುರುಗಾಂವ್ ಜಿಲ್ಲಾಧಿಕಾರಿ ಶ್ರೀ ಟಿ.ಎಲ್. ಸತ್ಯಪ್ರಕಾಶ್ ಅವರು ಹೇಳಿದರು. ಅವರು ಗುರುಗಾಂವ್ ಕನ್ನಡ ಸಂಘ ಹಾಗೂ ದೆಹಲಿ ಕರ್ನಾಟಕ ಸಂಘದ ಸಂಯುಕ್ತ ಆಶ್ರಯದಲ್ಲಿ ಗುರುಗಾಂವ್‌ನಲ್ಲಿ ಎಪ್ರಿಲ್ 5ರಂದು ನಡೆದ ಯುಗಾದಿ ಸಾಂಸ್ಕೃತಿಕ ಮಿಲನದ ಮುಖ್ಯ ಅತಿಥಿಯಾಗಿ ಆಗಮಿಸಿ ಮಾತಾಡುತ್ತಿದ್ದರು. ಗುರುಗಾಂವ್ ಕನ್ನಡ ಸಂಘದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ತನ್ನದೇ ಆದ ಕಟ್ಟಡಕ್ಕಾಗಿ ಜಿಲ್ಲಾಧಿಕಾರಿಯವರಿಗೆ ಈ ಸಂದರ್ಭದಲ್ಲಿ ಮನವಿ ಮಾಡಲಾಯಿತು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಗುರುಗಾಂವ್‌ನಲ್ಲಿ ಕನ್ನಡ ಚಟುವಟಿಕೆಗಳನ್ನು ಹೆಚ್ಚಿಸಲು ದೆಹಲಿ ಕರ್ನಾಟಕ ಸಂಘವು ಸದಾ ಪ್ರೋತ್ಸಾಹವನ್ನು ನೀಡುತ್ತದೆ ಮತ್ತು ಗುರುಗಾಂವ್ ಕನ್ನಡ ಸಂಘದ ಕಟ್ಟಡಕ್ಕಾಗಿ ದೆಹಲಿ ಕರ್ನಾಟಕ ಸಂಘದಿಂದ ಸಾಧ್ಯವಾದ ಸಹಾಯವನ್ನು ಎಲ್ಲರೂ ಸೇರಿ ಮಾಡುವೆವು ಎಂದು ಅವರು ಹೇಳಿದರು.

ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷ ಶ್ರೀ ಡಿ.ವಿ.ಯಸ್. ಮೂರ್ತಿ ಮತ್ತು ಕಾರ್ಯದರ್ಶಿ ಶ್ರೀ ಕೃಷ್ಣಪ್ಪ ಎಂ. ಮಾಜಿ ಅಧ್ಯಕ್ಷ ಶ್ರೀ ಸಾಯಿ ಪ್ರಸಾದ, ನಿವೃತ್ತ ಐ.ಎ.ಎಸ್. ಅಧಿಕಾರಿ ಶ್ರೀ ಸುಧೀರ್ ಮಿಶ್ರ ಮೊದಲಾದವರು ಉಪಸ್ಥಿತರಿದ್ದರು. ದೆಹಲಿ ಕನ್ನಡ ಶಾಲೆಯ ಅಧ್ಯಕ್ಷರಾದ ಡಾ. ವಿ.ಆರ್. ಗುಡ್ಡೇ ಗೌಡರು ಮಾತಾಡಿ ಗುರುಗಾಂವ್‌ನಲ್ಲಿ ಕನ್ನಡ ಶಾಲೆಯನ್ನು ತೆರೆಯುವುದಕ್ಕೆ ಅನುವು ಮಾಡಿಕೊಡಬೇಕೆಂದು ಜಿಲ್ಲಾಧಿಕಾರಿಗಳಗೆ ಮನವಿ ಸಲ್ಲಿಸಿದರು.

ಶ್ರೀ ವೆಂಕಟೇಶ ಆಚಾರ್ಯ ಅವರು ಪ್ರತಿ ವರ್ಷದಂತೆ ಈ ವರ್ಷವು ಕೂಡ ಯುಗಾದಿಯ ಸಂದರ್ಭದಲ್ಲಿ ಪಂಚಾಂಗವನ್ನು ಸರಳ ರೀತಿಯಲ್ಲಿ ಎಲ್ಲರಿಗೂ ಓದಿ ತಿಳಿಸಿದರು. ಸತಿ ಅವರ ನೇತೃತ್ವದಲ್ಲಿ ರಾಧಾ ಭಟ್ ಮತ್ತು ಗಜಾನನ ಶರ್ಮಾ ಅವರು ವ್ಯಾಖ್ಯಾನ ಮಾಡಿದರು. ಸಮಾರಂಭದ ಸಭಾಂಗಣದ ಪರಿಸರದಲ್ಲಿ ರಂಗೋಲಿ ಅಲಂಕಾರವನ್ನು ರೂಪ ಕುಮಾರ್, ಭಾರತಿ ಅಪ್ಪಾಸಾಬ್ ಮತ್ತು ಮಕ್ಕಳು, ವೀಣಾ ವೀರೇಶ ಹಾಗೂ ಶ್ವೇತಾ ರಾಜನ್ ಅವರು ಮಾಡಿದರು. ರಜನಿ ಪಾರ್ವತಿ ರೆಡ್ಡಿ ಅವರು ಮಲ್ಲಿಗೆ ಹೂ, ಅರಿಶಿನ, ಮತ್ತು ಕುಂಕುಮ ಹಂಚಿದರು.

ಪ್ರಾರ್ಥನೆ ಗೀತೆಯನ್ನು ಸುಮತಿ ಸಾಯಿ, ವಿನಿತಾ ದಯಾನಂದ, ಬೃಂದ ಸಂತೋಷ, ದಿವ್ಯಾ ಚಂದ್ರಶೇಖರ್ ಹಾಗೂ ರಾಧಾ ಭಟ್ ಹಾಡುವುದರ ಮೂಲಕ ಕಾರ್ಯಕ್ರಮವು ಆರಂಭವಾಯಿತು. ಪುಟಾಣಿಗಳಾದ ಖುಷಿ ಸಂತೋಷ, ಸಿಂಚು, ಹಿತಾಶ್ರಿ ರಘು, ನಮನ ನಾಗರಾಜ್, ಅನುಷ್ಕ ಬಸವರಾಜ, ನವ್ಯ ಕೃಷ್ಣಪ್ಪ, ಸ್ನೇಹ ಚಂದ್ರ, ಸೌಮ್ಯ ರಾಜಕುಮಾರ, ಶೃತಿ ಪ್ರಭಾಕರ್, ಪ್ರಮೋದ್ ಬಸಪ್ಪ, ಪೃಥ್ವಿರಾಜ್ ಲಕ್ಷ್ಮಣ್, ಸೂರಜ್ ತಿಮ್ಮಪ್ಪ, ಸಂಜಯ್ ಚಂದ್ರ, ಭರತ್ ಸಾಬು, ಸಂತೋಷ ಸಾಬು, ರೇಖಾ, ರಾಘವೆಂದ್ರ, ಶೃತಿ ಸಂಜಯ್, ಬಬಿತ ಯೋಗೇಶ್, ರೂಪ ಕುಮಾರ್, ಶ್ರೀಲಕ್ಷ್ಮೀ ಚಂದ್ರಶೇಖರ್, ಕವಿತಾ ಲಕ್ಷ್ಮಣ್, ಪ್ರಿಯದರ್ಶಿನಿ ಬಸಪ್ಪ, ಶಿವಲೀಲಾ ರಾಜಕುಮಾರ್, ಅನಿತಾ ಪ್ರಭಾಕರ್ ಹಾಗು ಸುನಂದ ಸಾಬು ಮೊದಲಾದವವರು ನೃತ್ಯ ಮತ್ತು ಸಂಗೀತ ಕಾರ್ಯಕ್ರಮಗಳನ್ನು ನೀಡಿದರು. ನಾಗಪ್ಪ, ರವಿ, ಸುದೀಪ್ ಅಭಿನಯಸಿದ ನಾಟಕ 'ಅಜ್ಜಿ ಮೊಮ್ಮಕ್ಕಳು' ತುಂಬಾ ಹಾಸ್ಯಮಯವಾಗಿತ್ತು.

ಶ್ರೀ ರಾಜನ್ ಮತ್ತು ಚಿನ್ನಪ್ಪ ಅವರು ತಯಾರಿಸಿದ ಗುರುಗಾಂವ್ ಕನ್ನಡ ಸಂಘದ ಕ್ಯಾಲೆಂಡರ್ ಕೂಡಾ ಈ ಸಂದರ್ಭದಲ್ಲಿ ಬಿಡುಗಡೆಯಾಯಿತು. ಗುರುಗಾಂವ್ ಕನ್ನಡ ಸಂಘದ ಕೋಶಾಧಿಕಾರಿ ವೆಂಕಟೇಶ ಆಚಾರ್ಯ ಅವರು ವಾರ್ಷಿಕ ಕಾರ್ಯಕ್ರಮಗಳ ವಿವರಣೆ ಹಾಗು ಲೆಕ್ಕಚಾರವನ್ನು ಮಂಡಿಸಿದರು. ಈಶ್ವರಲಿಂಗ ಅರೇರ ಅವರು ತಾಂತ್ರಿಕ ವ್ಯವಸ್ಥೆಗಳನ್ನು ನೋಡಿಕೊಂಡರು.

ಚೇತನ ಬಳಗ ತಂಡದಿಂದ 2014ರ ಸಾಲಿನ "ಚೇತನಶ್ರೀ" ಸ್ನೇಹಜೀವಿ ಪುರಸ್ಕಾರವನ್ನು ಶ್ರೀ ಪ್ರಸನ್ನ ಬಂಟ್ವಾಳ್ ಮತ್ತು ಶ್ರೀ ಶ್ರೀನಿವಾಸ ಅವರಿಗೆ ನೀಡಿ ಗೌರವಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ದೊಡ್ಡಮಲೆ ರವಿ ಮತ್ತು ತಂಡದವರು ಜಾನಪದ ಹಾಡುಗಳನ್ನು ಮತ್ತು ಭೂಮಿಕ ನೃತ್ಯ ಶಾಲೆ ಬೆಂಗಳೂರು ಇಲ್ಲಿನ ಮಕ್ಕಳು ನೃತ್ಯಗಳನ್ನು ಪ್ರಸ್ತುತ ಪಡಿಸಿದರು. ಅ

*ವೆಂಕಟೇಶ್ ಆಚಾರ್ಯ*











# ಹಾಲು-ಸಕ್ಕರೆಯಂತಿದ್ದ ತುಳು-ಕೊಂಕಣಿ ಸಂಭ್ರಮ

ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ತುಳು ಚಲನಚಿತ್ರ ಪ್ರದರ್ಶನ, ಮತ್ತು ಶ್ರೀ ಐ.ರಾಮಮೋಹನ ರಾವ್ ಮತ್ತು ನಿರ್ದೇಶಕ ರಾಜಶೇಖರ್ ಕೋಟ್ಯಾನ್ ಅವರಿಗೆ ಅಭಿನಂದನಾ ಕಾರ್ಯಕ್ರಮ ಮತ್ತು ಖ್ಯಾತ ಸಂಗೀತ ನಿರ್ದೇಶಕ ಗುರುಕಿರಣ್ ಅವರಿಂದ ತುಳು, ಕೊಂಕಣಿ, ಕನ್ನಡ ರಸಮಂಜರಿ ಕಾರ್ಯಕ್ರಮಗಳ ಜತೆಗೆ ವಿಭಿನ್ನವಾಗಿ ದೆಹಲಿ ಕರ್ನಾಟಕ ಸಂಘದ ಆಶ್ರಯದಲ್ಲಿ ತುಳು–ಕೊಂಕಣಿ ಸಂಭ್ರಮವನ್ನು ಸಂಘದ ಸಭಾಂಗಣದಲ್ಲಿ ಇದೇ ಎಪ್ರಿಲ್ 12ರಂದು ನಡೆಸಲಾಯಿತು.

ಶ್ರೀ ಐ.ರಾಮಮೋಹನ ರಾವ್ ಮತ್ತು ಶ್ರೀ ರಾಜಶೇಖರ್ ಕೋಟ್ಯಾನ್ ಅವರನ್ನು ಅಭಿನಂದಿಸಿ ಮಾತನಾಡಿದ ಮಾಜಿ ಕೇಂದ್ರ ಸಚಿವ ಶ್ರೀ ಆಸ್ಕರ್ ಫರ್ನಾಂಡಿಸ್, ಮೊದಲ ಬಾರಿಗೆ ಸಂಸತ್ತಿಗೆ ಪ್ರವೇಶಿಸಿದಾಗ ತುಳುನಾಡಿನ ರಾಮಮೋಹನರು ಪ್ರಧಾನಿಯವರ ಮಾಧ್ಯಮ ಸಲಹೆಗಾರರಾಗಿರುವುದು ತಿಳಿದು ಸಂತೋಷವಾಗಿತ್ತು. ರಾಮಮೋಹನ ಅವರಿಗೆ ಎಂ.ವಿ.ಕಾಮತ್ ಸ್ಮಾರಕ ಜೀವಮಾನ ಪ್ರಶಸ್ತಿ ಲಭಿಸಿರುವುದು ಸಂತಸವನ್ನುಂಟು ಮಾಡಿದೆ. ನನ್ನ ತಂದೆ ಎಂ.ವಿ.ಕಾಮತ್ ಅವರಿಗೆ ಶಿಕ್ಷಕರಾಗಿದ್ದರು ಎಂದು ಹಳೆಯ ನೆನಪುಗಳನ್ನು ಮೆಲುಕು ಹಾಕಿದರು.

ಅಭಿನಂದನೆ ಸ್ವೀಕರಿಸಿ ತುಳುವಿನಲ್ಲೇ ಮಾತನಾಡಿದ ಶ್ರೀ ಐ.ರಾಮಮೋಹನ ರಾವ್ ಅವರು ಖ್ಯಾತ ಪತ್ರಕರ್ತ ಎಂ.ವಿ.ಕಾಮತ್ ರೊಂದಿಗಿನ ತಮ್ಮ ಒಡನಾಟ ನೆನೆದರು. ಅಭಿನಂದನೆ ಸ್ವೀಕರಿಸಿ ಮಾತನಾಡಿದ ನಿರ್ದೇಶಕ–ನಿರ್ಮಾಪಕ ರಾಜಶೇಖರ್ ಕೋಟ್ಯಾನ್, ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸಿನಿಮಾವನ್ನು ಹಣಕ್ಕಾಗಿ ಮಾಡಿಲ್ಲ. ಸಮಾಜಕ್ಕೆ ಒಂದೊಳ್ಳೆ ಸಂದೇಶವನ್ನು ನೀಡುವ ದೃಷ್ಟಿಯಿಂದ ಮಾಡಿದ್ದೇನೆ ಎಂದು ತಿಳಿಸಿದರು. ತುಳು ಮತ್ತು ಕೊಂಕಣಿಯನ್ನು ಒಂದೇ ವೇದಿಕೆಗೆ ತಂದದ್ದು ಅರ್ಥಪೂರ್ಣವಾಗಿತ್ತು ಎಂದು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು.





ಬ್ರಹ್ಮಶ್ರೀ ನಾರಾಯಣ ಸೇವಾ ಸಮಿತಿ ಉಪಾಧ್ಯಕ್ಷ ಪ್ರಭಾಕರ ಬಂಗೇರ ಮತ್ತು ಶ್ರೀ ಸುರೇಂದ್ರ ಬಂಗೇರ ಉಪಸ್ಥಿತರಿದ್ದರು.

ದೆಹಲಿ ತುಳುಸಿರಿಯ ಅಧ್ಯಕ್ಷ ಹಾಗೂ ಸಂಘದ ಕೋಶಾಧ್ಯಕ್ಷ ಡಾ.ವೈ.ಅವನೀಂದ್ರನಾಥ್ ರಾವ್ ಅವರು ಸ್ವಾಗತವನ್ನೂ, ಸಂಘದ ಕಾರ್ಯದರ್ಶಿ ಶ್ರೀ .ಎಂ.ನಾಗರಾಜ್ ವಂದನಾರ್ಪಣೆಯನ್ನೂ ಹಾಗೂ ಶ್ರೀಮತಿ ಪೂಜಾ ರಾವ್ ಅವರು ನಿರೂಪಣೆಯನ್ನೂ ನಡೆಸಿಕೊಟ್ಟರು.

ಸಭಾ ಕಾರ್ಯಕ್ರಮದ ನಂತರ ಪ್ರದರ್ಶನಗೊಂಡ ರಾಜಶೇಖರ್ ಕೋಟ್ಯಾನ್ ನಿರ್ಮಿಸಿ ನಿರ್ದೇಶಿಸಿದ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಚಲನಚಿತ್ರವು, ಸಾಮಾಜಿಕ ಕ್ರಾಂತಿಯ ಹರಿಕಾರ ನಾರಾಯಣ ಗುರುವಿನ ಜೀವನ ಚರಿತ್ರೆ ಹಾಗೂ ಅವರ ಸಾಧನೆಯನ್ನು ಪ್ರೇಕ್ಷಕರಿಗೆ ಮನಮುಟ್ಟುವಂತೆ ತಲುಪಿಸಿತು.

ಗುರುಕಿರಣ್ ತಂಡ ನಡೆಸಿಕೊಟ್ಟ ತುಳು–ಕೊಂಕಣಿ ರಸಮಂಜರಿ ಕಾರ್ಯಕ್ರಮವು, ಪ್ರೇಕ್ಷಕರನ್ನು ತನ್ನ ಆಸನದಿಂದ ಎದ್ದು ಹಾಡಿಗೆ ಹೆಜ್ಜೆ ಹಾಕುವಂತೆ ಮಾಡಿತು. ಸಭಿಕರು ಕನ್ನಡ ಹಾಗೂ ಹಿಂದಿ ಹಾಡುಗಳನ್ನೂ ಸವಿದರು. ಸುಮಾರು ಮೂರು ಗಂಟೆಗಳ ಕಾಲ ಗುರುಕಿರಣ್, ಅನುರಾಧ ಭಟ್, ಪಲ್ಲವಿ ಜಿ.ಶೆಟ್ಟಿ, ರಾಬಿನ್ ಪೌಲ್ ಸಿಕ್ವೇರಾ ಹಾಗೂ ನವೀನ್ ಕೊಪ್ಪಳ ದೆಹಲಿ ಕನ್ನಡಿಗರನ್ನು ರಂಜಿಸಿದರು. ರಾಜಗೋಪಾಲ್ ಕೆ, ಷಿಜಿಮೋನ್ ಸಿ.ಬಿ, ಭಾಸ್ಕರ್ ಕೆ, ಅಂಥೋನಿ ಕಾಮ ಮತ್ತು ಎಚ್.ಎಸ್.ನಾಗರಾಜು ವಾದ್ಯಗಳ ಮೂಲಕ ಹಿನ್ನೆಲೆ ಸಂಗೀತ ನೀಡಿದರು. ಅ

***ವೃಷಾಂಕ್ ಭಟ್***









# ಪ್ರಥಮ ಕನ್ನಡ ಭಾರತಿ ಪ್ರಶಸ್ತಿ ಎಂ.ವಿ. ನಾರಾಯಣ ರಾವ್‌ರವರಿಗೆ

"ದೆಹಲಿಯಂತಹ ದೂರದ ಊರಿನಲ್ಲಿ 'ಕನ್ನಡ ಭಾರತಿ' ಎಂಬ ಹವ್ಯಾಸಿ ರಂಗ ಚಟುವಟಿಕೆಗಳ ಕೂಟವನ್ನು ಕಟ್ಟಿ ಹಲವಾರು ಉತ್ತಮ ನಾಟಕಗಳಲ್ಲಿ ನಟಿಸಿ, ಕನ್ನಡದ ಕಂಪನ್ನು ಬೀರಿದ ಹಿರಿಯ ಸಜ್ಜನಿ, ನಟ ಎಂ.ವಿ. ನಾರಾಯಣ ರಾವ್ ಅವರಿಗೆ ದೆಹಲಿ ಕರ್ನಾಟಕ ಸಂಘವು ಪ್ರಥಮ ಕನ್ನಡ ಭಾರತಿ ಪ್ರಶಸ್ತಿ ನೀಡಿ ಗೌರವಿಸುವಂತಹ ಒಂದು ಸೃಜನಶೀಲ ಕಾರ್ಯ ಮಾಡಿರುವುದು ನನಗೆ ಅತ್ಯಂತ ಹೆಮ್ಮೆ ಮತ್ತು ಸಂಭ್ರಮ ತಂದಿದೆ ಎಂದು ಪ್ರಶಸ್ತಿ ಪ್ರದಾನ ಮಾಡಿದ ಸುಪ್ರಸಿದ್ಧ ಚಲನಚಿತ್ರ ನಿರ್ದೇಶಕರು, ಶ್ರೇಷ್ಠ ರಂಗ ತಂತ್ರಜ್ಞರಾಗಿರುವ ಹಾಗು ಕನ್ನಡ ಭಾರತಿ ಸ್ಥಾಪಕ ಅಧ್ಯಕ್ಷರೂ ಆಗಿರುವ ಪದ್ಮಶ್ರೀ ಶ್ರೀ ಎಂ.ಎಸ್. ಸತ್ಯು ಅವರು ನುಡಿದರು".

1960ರ ದಶಕದಲ್ಲಿ ಕೇಂದ್ರ ಸರ್ಕಾರದ ಉದ್ಯೋಗದ ನಿಮಿತ್ತ ದೆಹಲಿಗೆ ಬಂದ ಶ್ರೀ ಎಂ.ವಿ. ನಾರಾಯಣ ರಾವ್‌ರವರು ದೆಹಲಿಯಲ್ಲಿದ್ದ ಶಾ. ಬಾಲೂ ರಾವ್, ಯು. ಪ್ರಭಾಕರ ರಾವ್, ಎಚ್. ಎಸ್. ಕುಲಕರ್ಣಿ, ಭೀಮರಾವ್ ಮುರಗೋಡ, ಜ್ಯೋತ್ಸ್ನಾ ರಾವ್, ಎಂ.ವಿ. ಸುಬ್ಬಯ್ಯ, ಡಾ. ಧೀರೇಂದ್ರ ರಾವ್, ಕೆ. ಶ್ರೀನಿವಾಸ ರಾವ್, ಡಿ. ರಮೇಶ್, ವಿ. ರಾಮಮೂರ್ತಿ ಹತ್ತಾರು ಸದಭಿರುಚಿಯ ಕನ್ನಡಿಗರನ್ನು ಒಗ್ಗೂಡಿಸಿ ಕನ್ನಡ ಭಾರತಿ ಮೂಲಕ ಹಲವಾರು ಶ್ರೇಷ್ಠ ನಾಟಕಗಳನ್ನು ದೆಹಲಿಯ ಕನ್ನಡಿಗರಿಗೆ ನೀಡಿದರು. ಇವರ ಪ್ರಯತ್ನಕ್ಕೆ ಶ್ರೇಷ್ಠ ರಂಗ ನಿರ್ದೇಶಕರುಗಳಾದ ಬಿ.ವಿ. ಕಾರಂತ, ಎಂ.ಎಸ್. ಸತ್ಯು, ಯು. ಪ್ರಭಾಕರ ರಾವ್ ನಿರ್ದೇಶನ ಮಾಡಿದರೆ ನಾಟಕಗಳ ವಸ್ತು ಗಿರೀಶ್ ಕಾರ್ನಾಡ, ಶ್ರೀರಂಗ, ಸಂಸ, ಕೈಲಾಸಂ, ಜಿ.ಬಿ. ಜೋಷಿ, ಆನಂದ ಮೊದಲಾದ ಹೆಸರಾಂತ ಕನ್ನಡ ನಾಟಕಕಾರರಿಂದ ಆಯ್ದುಕೊಂಡರು. ಜೊತೆಗೆ ವಿಜಯ್ ತೆಂಡೂಲ್ಕರ್, ಲಲಿತಾ ಸೆಹಗಲ್, ಮೋಹನ್ ರಾಕೇಶ್ ಮೊದಲಾದವರ ಹಿಂದಿ ನಾಟಕಗಳ ಕನ್ನಡ ರೂಪಾಂತರವನ್ನು ರಂಗಪ್ರಯೋಗಕ್ಕೆ ಒಳಪಡಿಸಿದರು. ಕಾರ್ನಾಡರ ತುಘಲಕ್, ಡಿ.ವಿ.ಜಿ. ಅವರ ಮ್ಯಾಕ್‌ಬೆತ್, ದಾರಿ ಯಾವುದಯ್ಯ ವೈಕುಂಠಕ್ಕೆ, ವಿಜಯ ನಾರಸಿಂಹ, ಮೋಟೇರಾಮನ ಸತ್ಯಾಗ್ರಹ, ಮುದ್ರಾರಾಕ್ಷಸ, ರಂಗಭಾರತ, ಯಯಾತಿ, ಹಯವದನ, ಕುರಿ, ಇಂತಹ ಅನೇಕ ಅದ್ಭುತ ನಾಟಕಗಳನ್ನು ಕನ್ನಡ ಭಾರತಿ ಪ್ರಸ್ತುತಪಡಿಸಿದೆ.

ಕನ್ನಡ ಭಾರತಿ ಪ್ರಥಮ ಪ್ರಶಸ್ತಿಯನ್ನು ಸ್ವೀಕರಿಸಿದ ಶ್ರೀ ಎಂ.ವಿ. ನಾರಾಯಣ ರಾವ್ ಅವರು 'ಈ ಪ್ರಶಸ್ತಿ ಕನ್ನಡ ಭಾರತಿಯ ಪ್ರತಿಯೊಬ್ಬ ಸದಸ್ಯನಿಗೂ ಸಂದಿದ್ದಾಗಿದ್ದು ಅವರೆಲ್ಲರ ಪ್ರತಿನಿಧಿಯಾಗಿ ನಾನಿದನ್ನು ಅತ್ಯಂತ ವಿನಮ್ರತೆಯಿಂದ ಸ್ವೀಕರಿಸುತ್ತಿದ್ದೇನೆ' ಎಂದರು. ತಮ್ಮ 1960ರ ದಶಕದಿಂದ ಇಂದಿನವರೆಗೆ ನಡೆದು ಬಂದ ರಂಗದ ಮೇಲಿನ ಮತ್ತು ರಂಗದ ಹಿಂದಿನ ಜೀವನ, ಕನ್ನಡ ಭಾರತಿ ಬೆಳೆದು ಬಂದ ಸ್ಥಿತಿಗತಿಗಳು ಹಾಗೂ ಹಲವಾರು ಒಡನಾಡಿಗಳು ತೋರಿದ ಸ್ನೇಹ, ವಿಶ್ವಾಸ ಮತ್ತು ಕಟುಬದ್ಧತೆಯನ್ನು ಸ್ಮರಿಸಿದರು. ಈ ಸಂದರ್ಭದಲ್ಲಿ ರಾವ್ ಅವರು 'ಈ ಪ್ರಶಸ್ತಿಯ ಮೊತ್ತವನ್ನು ಕನ್ನಡ ಭಾರತಿ'ಗೆ ನೀಡಲಿದ್ದೇನೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹಿರಿಯ ನಾಟಕಕಾರ, ಕವಿ ಮತ್ತು ವಿದ್ವಾಂಸ ಪ್ರೊ. ಎಚ್. ಎಸ್. ಶಿವಪ್ರಕಾಶ್‌ರವರು ಮಾತನಾಡುತ್ತ 'ನಾಟಕಗಳ ಮೂಲಕ ನೈಜ ಜೀವನದ ಅನುಭವಗಳನ್ನು ಜೀವಂತವಾಗಿ ಪ್ರೇಕ್ಷಕರಿಗೆ ತೋರಿಸುವ ಅತ್ಯಂತ ಕಷ್ಟದ ಕೆಲಸವನ್ನು ದೂರದ ದೆಹಲಿಯಲ್ಲಿ ಅಂದಿನ ದಿನಗಳಲ್ಲಿ ಶ್ರಮವಹಿಸಿ ದುಡಿದು ಮಾಡಿದ ನಾರಾಯಣ ರಾವ್ ಅವರನ್ನು ಗೌರವಿಸುವುದರ ಮೂಲಕ ದೆಹಲಿ ಕರ್ನಾಟಕ ಸಂಘವು ತನ್ನ ಸಾಂಸ್ಕೃತಿಕ ಚರಿತ್ರೆಯ ಪುಟಗಳಲ್ಲಿ ಒಂದು ಹೊಸ ಅಧ್ಯಾಯವನ್ನೇ ಆರಂಭಿಸಿದೆ ಎಂದರು'.

ಕನ್ನಡ ಭಾರತಿ ಪ್ರಶಸ್ತಿ, ದೆಹಲಿ ಕರ್ನಾಟಕ ಸಂಘವು ಕನ್ನಡ ಭಾರತಿಯು ದೆಹಲಿ ಹಾಗು ದೇಶದ ಕನ್ನಡ ರಂಗಭೂಮಿಗೆ ನೀಡಿದ ವಿಶೇಷ ಕೊಡುಗೆಯನ್ನು ಗುರುತಿಸಿ ಈ ಚಟುವಟಿಕೆಗಳಿಗಾಗಿ ದುಡಿಯುತ್ತಿರುವ ಕನ್ನಡಿಗರೊಬ್ಬರಿಗೆ ವರ್ಷಂಪ್ರತಿ 50,000/– ರೂಪಾಯಿಗಳ ನಗದು, ಫಲಕ ಹಾಗೂ ಪ್ರಯಾಣ ವೆಚ್ಚವನ್ನೊಳಗೊಂಡ ಪ್ರಶಸ್ತಿ ನೀಡಿ ಗೌರವಿಸುವ ಹಾಗು ಅದೇ ಸಂದರ್ಭದಲ್ಲಿ ಸ್ಥಳೀಯ ಕಲಾವಿದರ ಮೂಲಕ ಒಂದು ಉತ್ತಮ ನಾಟಕ ಕೃತಿಯನ್ನು ರಂಗದ ಮೇಲೆ ತರುವ ತೀರ್ಮಾನ ಮಾಡಿದೆ ಎಂದು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ತಿಳಿಸಿದರು. ಈ ಸಂದರ್ಭದಲ್ಲಿ ಹಲವಾರು ಮಂದಿ ಕನ್ನಡ ಭಾರತಿಯ ಹಿರಿಯ ಸದಸ್ಯರುಗಳು ಹಾಜರಿದ್ದು ಕರ್ನಾಟಕ ಸಂಘದ ಈ ಮಹತ್ವದ ತೀರ್ಮಾನವನ್ನು ಶ್ಲಾಘಿಸಿದರು.

ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ದಶಮಾನೋತ್ಸವ, ಮೈಸೂರು ರಂಗಾಯಣದ ಬೆಳ್ಳಿಹಬ್ಬದ ಸಂದರ್ಭ ಹಾಗೂ ಕನ್ನಡ ಭಾರತಿಯ ಚಿನ್ನದ ಹಬ್ಬದ ಸುಸಂದರ್ಭದಲ್ಲಿ ಆಯೋಜಿಸಲಾಗಿರುವ ಈ ಒಂದು ಮಹತ್ವದ ಕಾರ್ಯಕ್ರಮಕ್ಕೆ ಶಿಖರವಿಟ್ಟಂತೆ ಮೈಸೂರು ರಂಗಾಯಣದ ಪ್ರಸಿದ್ಧ ನಿರ್ದೇಶಕರು ಮತ್ತು ರಂಗ ತಜ್ಞರೂ ಆದ ಶ್ರೀ ಮಂಜುನಾಥ್ ಬೆಳಕೆರೆಯವರು ದೆಹಲಿಯ ಸ್ಥಳೀಯ ಕನ್ನಡ ಕಲಾವಿದರನ್ನೊಳಗೊಂಡು ನಿರ್ದೇಶಿಸಿ ಪ್ರಸ್ತುತಪಡಿಸಿದ "ಸೇವಂತಿ ಪ್ರಸಂಗ" ನೆರೆದಿದ್ದ ಎಲ್ಲ ಸಭಿಕರ ಮನಸ್ಸನ್ನು ಸೂರೆಗೊಂಡಿತು.

ಸದಾ ನಾಟಕವನ್ನೇ ಉಸಿರಾಗಿಸಿಕೊಂಡಿರುವ ಶ್ರೀ ಎಂ.ಎಸ್. ಸತ್ಯು ಹಾಗು ಶ್ರೀ ಎಚ್. ಎಸ್. ಶಿವಪ್ರಕಾಶ್ ಅವರು ಈ ಸಂದರ್ಭದಲ್ಲಿ ಮುಂಬರುವ ದಿನಗಳಲ್ಲಿ ದೆಹಲಿ ಕರ್ನಾಟಕ ಸಂಘದ ಆಶ್ರಯದಲ್ಲಿ ಸ್ಥಳೀಯ ಕಲಾವಿದರ ಮೂಲಕ ನಾಟಕಗಳ ನಿರ್ದೇಶಿಸಲು ಮುಂದಾಗಿರುವುದು ಕರ್ನಾಟಕ ಸಂಘದ ಈ ಕಾರ್ಯಕ್ರಮದ ಯಶಸ್ವಿಗೆ ನಿದರ್ಶನವಾಗಿದೆ. ಅ

*ಸಖಾರಾಮ ಉಪ್ಪೂರು*



# ಸೇವಂತಿ ಪ್ರಸಂಗ ನಾಟಕ ಒಂದು ಅನುಭವ



ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ದಶಮಾನೋತ್ಸವದ ಅಂಗವಾಗಿ ನಿರಂತರವಾಗಿ ನಡೆದ ಅನೇಕ ಕಾರ್ಯಕ್ರಮಗಳಲ್ಲಿ ಮೈಸೂರು ರಂಗಾಯಣದ ಮಂಜುನಾಥ ಬೆಳಕೆರೆಯವರು ತರಬೇತಿ ನೀಡಿ ಮಾಡಿದಂತಹ ಜಯಂತ ಕಾಯ್ಕಿಣಿ ಅವರ 'ಸೇವಂತಿ ಪ್ರಸಂಗ' ನಾಟಕವೂ ಒಂದು.

ಈ ನಾಟಕವು ಏಪ್ರಿಲ್ 19ರಂದು ಯಶಸ್ವಿಯಾಗಿ ಪ್ರದರ್ಶನಗೊಂಡಿತು. ಇದರಲ್ಲಿ ಸುಮಾರು 20 ಜನ ಭಾಗವಹಿಸಿದ್ದರು. ಅದರಲ್ಲಿ ನಾನೂ ಸಹ ಒಬ್ಬಳಾಗಿರುವುದು ನನಗೆ ತುಂಬಾ ಸಂತೋಷದ ವಿಚಾರವಾಗಿದೆ. ಮೊದಲಿನಿಂದಲೂ ನನಗೆ ನಾಟಕ, ನೃತ್ಯ, ಸಾಹಿತ್ಯ ಕಲೆಗಳಲ್ಲಿ ತುಂಬಾ ಆಸಕ್ತಿಯಿದ್ದು, ಶಾಲಾ–ಕಾಲೇಜುಗಳಲ್ಲಿ ಭಾಗವಹಿಸಿದ್ದೆ. ನಂತರ ದೆಹಲಿ ಕರ್ನಾಟಕ ಸಂಘದಲ್ಲಿ ಅನೇಕ ನೃತ್ಯ ಹಾಗೂ ಅನೇಕ ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರೂ ಮೊದಲ ಬಾರಿಗೆ ನಾಟಕವನ್ನು ಅದೂ ಹೆಸರಾಂತ ರಂಗಕಲಾವಿದರಾದ ಮಂಜುನಾಥ ಬೆಳಕೆರೆಯವರ ಹತ್ತಿರ ತರಬೇತಿ ಸಿಕ್ಕಿದ್ದು ನನಗೆ ತುಂಬಾ ಸಂತೋಷ ತಂದಿದೆ.

ನನ್ನ ಮನೆ ಸಂಘದಿಂದ ತುಂಬಾ ದೂರ ಇರುವ ಕಾರಣ ನಾನು ಮೆಟ್ರೋ ಮತ್ತು ಬಸ್ ಎರಡನ್ನೂ ಬದಲಿಸಿ ನನ್ನ ಚಿಕ್ಕ ಎರಡು ಮಕ್ಕಳ ಶಾಲೆಯನ್ನು ಮುಗಿಸಿಕೊಂಡು ತರಬೇತಿಗೆ ಬಂದು, ಮತ್ತೆ ಬೆಳಗ್ಗೆ 6ಕ್ಕೆ ಮಕ್ಕಳನ್ನು ಶಾಲೆಗೆ ತಯಾರು ಮಾಡಬೇಕಿತ್ತು. ನಂತರ ಶಾಲೆಯಿಂದ ಬಂದ ನಂತರ ಊಟ ಮಾಡಿಸಲೂ ಸಹ ಸಮಯ ಸಿಗುತ್ತಿರಲಿಲ್ಲ. ಆದರೂ ನಾಟಕ ತರಬೇತಿಗೆ ಬಂದರೆ ಅಲ್ಲಿ ನಮ್ಮ ಆಯಾಸವೆಲ್ಲಾ ಮರೆತುಹೋಗುತ್ತಿತ್ತು.

ಆದರೆ ಮಧ್ಯೆ ಬೆಳಿಗ್ಗೆ 9ಗಂಟೆಗೆ ಬರಬೇಕು (ರಜಾದಿನಗಳಲ್ಲಿ) ಎಂದಾಗ ಮಾತ್ರ ತೊಂದರೆಯಾಗುತ್ತಿತ್ತು. ಕಾರಣ 1–2 ಬಾರಿ ಬೆಳಗಿನ ತಿಂಡಿಯನ್ನು ನೀಡಿದ್ದರು. ಆಮೇಲೆ ಕೆಲವು ಕಾರಣಾಂತರಗಳಿಮದ ಕೊನೆಯ 4ದಿನ ಬೆಳಿಗ್ಗೆ 9 ರಿಂದ 10 ಗಂಟೆಗೆ ಹೋಗಬೇಕಾದಾಗ ಬೆಳಗಿನ ತಿಂಡಿಯನ್ನು ಮನೆಯಲ್ಲಿಯೇ ಮಾಡಿ ಬರಬೇಕೆಂದಿದ್ದು ಮಾತ್ರ ನನಗೆ ದೂರದಿಂದ ಬರುತ್ತಿದ್ದ ಕಾರಣ ತೊಂದರೆಯಾಗುತ್ತಿತ್ತು.

ಮಂಜುನಾಥ ಬೆಳಕರೆಯವರು ಇಂಗ್ಲಿಷ್ ಮೂಲದ ಬರ್ನಾಡ್ ಷಾ ಬರೆದಿರುವ ಪಿಗ್‌ಮ್ಯಾಲಿಯನ್ ನಾಟಕವನ್ನು ಆರಿಸಿದ್ದರು. ಇದು ಇಂಗ್ಲಿಷ್‌ನಲ್ಲಿ ಸಿನಿಮಾ ಸಹಾ ಆಗಿದೆ ಎಂದು ತಿಳಿದು ಸಂತೋಷವಾಯಿತು. ಇದನ್ನು ಕನ್ನಡಕ್ಕೆ ಜಯಂತ್ ಕಾಯ್ಕಿಣಿಯವರು ಅನುವಾದಿಸಿ 'ಹೂ ಹುಡುಗಿ' ಎಂದಾಗಿತ್ತು. ಅದನ್ನು ಓದಿದಾಗ ಅದರಲ್ಲಿ ಪಾತ್ರಗಳು ತುಂಬಾ ಕಡಿಮೆ ಇದ್ದವು. ಆದರೆ ನಾವು ಮಾತ್ರ ಸುಮಾರು 18 ಮಂದಿ ಇದ್ದೆವು. ಅದು ಹೇಗೆ ಸಾಧ್ಯ ಎಂದುಕೊಂಡು ಬೆಳಕೆರೆಯವರಿಗೆ ಹೇಳಿದೆವು. ಅದೇನು ಸರಿ ಆದರೆ ನಮ್ಮಲ್ಲಿ ಸಮಯ ತುಂಬ ಕಡಿಮೆ ಇದೆ. ಸಮಯವನ್ನು ಇನ್ನೂ 1–2 ವಾರ ವಿಸ್ತರಿಸಿದರೆ ಬೇರೆ ನಾಟಕ ಮಾಡಬಹುದಾಗಿತ್ತು ಎಂದರು. ಆದರೆ ಸಮಯ ಮೊದಲೇ ನಿರ್ಧಾರವಾಗಿದ್ದರಿಂದ ಅದು ಅಸಾಧ್ಯವಾಗಿತ್ತು.

ನಂತರ ಮಂಜುನಾಥ ಬೆಳಕೆರೆಯವರು ತಮ್ಮ ನೈಪುಣ್ಯದಿಂದ ನಾಟಕವನ್ನು ಅಲ್ಲಲ್ಲಿ ಬದಲಿಸಿ, ಇಲ್ಲದ ಕೆಲವು ಪಾತ್ರಗಳನ್ನು ಸೃಷ್ಟಿ ಮಾಡಿ ನಮ್ಮೆಲ್ಲರಿಗೂ ಸಹಾ ಒಳ್ಳೆಯ ತರಬೇತಿಯನ್ನು ನೀಡಿದರು. ಮೊದಮೊದಲು ನನ್ನದು ತುಂಬಾ ಸಣ್ಣ ಪಾತ್ರ ಎಂದು ಬೇಸರವಾಗಿತ್ತು. ಕಾರಣ ತುಂಬಾ ದೂರದಿಂದ ಎರಡು ಚಿಕ್ಕ ಮಕ್ಕಳನ್ನೂ ಕರೆದುಕೊಂಡು ಬಂದು ಇಷ್ಟು ಚಿಕ್ಕ ಪಾತ್ರಮಾಡಬೇಕಲ್ಲ ಎಂದು. ನಂತರ ಬೆಳಕೆರೆಯವರು ಮೊದಲೇ ನಾಟಕದ ಪ್ರಿಲಿಮಿನರಿ





ಮೀಟಿಂಗ್‌ನಲ್ಲಿ ಹೇಳಿದ ಒಂದು ಮಾತು ನನೆಪಾಯಿತು. ಅದು "ನೀವು ನಾಟಕಕ್ಕಾಗಿ ನಾಟಕ ಮಾಡಬೇಡಿ, ಅನುಭವಕ್ಕಾಗಿ ನಾಟಕ ಮಾಡಿ" ಎಂದಿದ್ದರು. ಈ ಮಾತು ನನಗೆ ತುಂಬಾ ಸಂತೋಷವಾಯಿತು.

ಮೊದಲಿಗೆ ಕೆಲವು ನಾಟಕದ ವ್ಯಾಯಾಮಗಳನ್ನು ಮಧ್ಯೆ ಮಧ್ಯೆ ಮಾಡಿಸುತ್ತಿದ್ದರು. ಜೊತೆ ಜೊತೆಗೆ ನಾಟಕವನ್ನು ಬಹಳ ಕಡಿಮೆ ಸಮಯದಲ್ಲಿಯೇ ನಮಗೆಲ್ಲರಿಗೂ ತರಬೇತಿ ನೀಡಿ ನಮ್ಮ ನಾಟಕವನ್ನೂ ಯಶಸ್ವಿಯಾಗಿಸಿದರು. ಅಂದರೆ ವಾರದ ದಿನಗಳಲ್ಲಿ ಸಂಜೆ 6 ರಿಂದ 9 ಅಥವಾ 10ಗಂಟೆ, ರಜಾದಿನಗಳಲ್ಲಿ ಮತ್ತು ಕೊನೆಯ 4 ದಿನಗಳು ನಿರಂತರ ಪೂರ್ತಿ ದಿನ ತಾಲೀಮು ಮಾಡಿದೆವು. ಮೊದಲ ಬಾರಿಗೆ ನಾಟಕ ಮಾಡುವವರು ನಾನೂ ಸೇರಿ 4 ಜನ ಇದ್ದೆವು.

ಮೊದಲು ಸಂಘದಲ್ಲಿ ಅನೇಕ ನಾಟಕಗಳನ್ನೂ ನೋಡಿದ್ದೆನು. ಆದರೆ ಈ ರೀತಿ ಒಬ್ಬ ರಂಗಕರ್ಮಿ ನಾಟಕಕಾರರು ಬಂದು ನಮಗೆ ವಿಭಿನ್ನವಾದ ರೀತಿಯಲ್ಲಿ ಅಂದರೆ ರಂಗ ಸಜ್ಜಿಕೆ ಮಾಡುವುದು, ಅದಕ್ಕೆ ಬೇಕಾದಂತಹ ವಸ್ತ್ರವಿನ್ಯಾಸ, ಅಗತ್ಯವಾದಂತಹ (ವಸ್ತುಗಳು) ಪ್ರಾಪರ್ಟಿಸ್‌ಗಳನ್ನು ಹೇಗೆ ಯಾವ ರೀತಿ ಮಾಡಬೇಕು, ನಿಭಾಯಿಸಬೇಕೆಂದು ಕಲಿಸಿಕೊಟ್ಟರು. ಜೊತೆಗೆ ಅದ್ಭುತ ಕಲಾವಿದ ಸುಧೀರ್ ಫಡ್ನೀಸ್ ಅವರು 'ಕಸದಿಂದ ರಸ' ಎನ್ನುವ ಹಾಗೆ ವೇಸ್ಟ್ ಮೆಟಿರಿಯಲ್‌ನಿಂದ ಬಹಳ ಅದ್ಭುತವಾಗಿ ಸಹಜ ಕ್ಯಾಮರಾವನ್ನು ನಾಚಿಸುವಂತೆ ನಕಲಿ ಕ್ಯಾಮರಾವನ್ನು ತಯಾರಿಸಿದ್ದು ಮತ್ತು ನಾಟಕದ ಪ್ರದರ್ಶನದ ವೇಳೆ ಒಂದು ಸುಂದರವಾದ ಕಲಾಕೃತಿಯ ಪರದೆಯ 'ರಂಗ ವಿನ್ಯಾಸ'ವೂ ಮನಮೋಹಕವಾಗಿ ಚಿತ್ರಿಸಿದ್ದರು. ಜೊತೆಗೆ ಶಿವಾನಂದ ಇಂಗಳೇಶ್ವರವರು ಸಹಾ ನಮಗೆ ತುಂಬಾ ರೀತಿಯಲ್ಲಿ ಸಹಾಯ ಹಸ್ತವನ್ನು ಮತ್ತು ಸಲಹೆಗಳನ್ನು ನೀಡಿದ್ದರು. ಪ್ರಕಾಶ್ ಶೆಟ್ಟಿಯವರು ಮಾಡಿದಂತಹ ಸುಂದರವಾದ ಹಾಗೂ ವಿಭಿನ್ನವಾದ ನಾಟಕದ ಆಮಂತ್ರಣ ಪತ್ರಿಕೆ ತಯಾರಿಸಿದರೆ, ಆನಂದ ಮುರಗೋಡ ಅವರ ನಾಟಕದ ಛಾಯಾಚಿತ್ರಗಳು ಅದ್ಭುತವಾಗಿದ್ದವು. ಹೀಗೆ ಎಲ್ಲರೂ ಒಟ್ಟಾಗಿ ಈ 18 ದಿನಗಳ ಕಾಲ ದೆಹಲಿ ಕರ್ನಾಟಕ ಸಂಘವೇ ಮನೆಯಾಗಿ ಒಂದೇ ಕುಟುಂಬದ ರೀತಿಯಲ್ಲಿ ಅಲ್ಪ ಸ್ವಲ್ಪ ಇರಿಸು ಮುರುಸುಗಲೊಂದಿಗೆ ನಾವೆಲ್ಲರೂ ಒಂದೇ ಕುಟುಂಬದ ಸದಸ್ಯರಾಗಿ ಇದ್ದದ್ದು ತುಂಬಾ ಅವಿಸ್ಮರಣೀಯ.

ಈ ರೀತಿಯಾಗಿ ಮಹಾನ್ ಕಲಾವಿದರಿಂದ ತರಬೇತಿ ಪಡೆದು, ಖ್ಯಾತ ನಾಟಕಕಾರು ಮತ್ತು ಸಾಹಿತಿಗಳು ಆದಂತಹ ಪ್ರೊ. ಎಚ್.ಎಸ್. ಶಿವಪ್ರಕಾಶ್, ಖ್ಯಾತ ನಾಟಕಕಾರರು ಮತ್ತು ಚಲನಚಿತ್ರ ನಿರ್ದೇಶಕರು ಆದ ಎಂ.ಎಸ್. ಸತ್ಯು, ಖ್ಯಾತ ರಂಗಕರ್ಮಿ ಎಂ.ವಿ. ನಾರಾಯಣ ರಾವ್ ಅವರ ಮುಂದೆ ಮಂಜುನಾಥ ಬೆಳಕೆರೆಯವರ ಸಾಂಗತ್ಯದಲ್ಲಿ ನಮ್ಮ ನಾಟಕವು ಪ್ರದರ್ಶನವಾಗಿದ್ದು ನನ್ನ ಅದೃಷ್ಟವೇ ಸರಿ ಎನ್ನಿಸುತ್ತದೆ.

ಜೊತೆಗೆ ಈ ನಾಟಕ ಮುಂದೆ ಜೂನ್‌ನಲ್ಲಿ ಮೈಸೂರು, ಬೆಂಗಳೂರಿನಲ್ಲಿಯೂ ಸಹ ಪ್ರದರ್ಶನಗೊಳ್ಳುವ ಸಾಧ್ಯತೆಗಳಿವೆ. ಇದರಿಂದ ಮುಂದೆಯೂ ನಾನು ಅನೇಕ ನಾಟಕಗಳಲ್ಲಿ ಭಾಗವಹಿಸುವ ಅವಕಾಸವೂ ನನಗೆ ದೊರಕುವಂತಾಗಿದೆ. ಇದಕ್ಕೆಲ್ಲಾ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಸಾಹಿತ್ಯ, ಸಂಗೀತ, ಕಲೆಗೆ ನೀಡುತ್ತಿರುವ ಅಪಾರವಾದ ಪ್ರೋತ್ಸಾಹವೇ ಮುಖ್ಯ ಕಾರಣವೆಂದು ನನ್ನ ಅಭಿಪ್ರಾಯವಾಗಿದೆ. ಜೊತೆಗೆ ಸಂಘದ ಅನೇಕ ಸದಸ್ಯರು ಸಹ ಕೈಜೋಡಿಸಿದ್ದಾರೆ.

ಇದು ಹೀಗೆಯೇ ನಿರಂತರವಾಗಿ ಮುಂದುವರೆಯುತ್ತಾ ಎಲ್ಲರೂ ಸೇರಿ ನಮ್ಮ ಕನ್ನಡ ಭಾಷೆ, ಸಂಸ್ಕೃತಿಯನ್ನು ಎಲ್ಲಾ ಕಡೆಯೂ ಪಸರಿಸಿ ಕನ್ನಡದ ಕಂಪನ್ನು, ನಮ್ಮ ಕನ್ನಡದ ಕಹಳೆಯನ್ನೂ ದೇಶ-ವಿದೇಶದಲ್ಲೂ ಮೊಳಗಿಸಲು ಪ್ರತಿಯೊಬ್ಬ ಕನ್ನಡಿಗನೂ ಸಹಾ ಕೈ ಜೋಡಿಸಬೇಕು. ಅ

**ಶೈಲಾ ರವಿಕುಮಾರ್**

# ದೆಹಲಿಯ ಹವ್ಯಾಸಿ ರಂಗ ಕಲಾವಿದರಿಂದ ಅದ್ಭುತ ಪ್ರದರ್ಶನ

'ಪಿಗ್ಮ್ಯಾಲಿಯನ್' ನಾಟಕದ ಕರ್ತೃ ಜಾರ್ಜ್ ಬರ್ನಾಡ್ ಷಾ ತನ್ನ ನಾಟಕದ ಶೀರ್ಷಿಕೆಯನ್ನು ಗ್ರೀಕ್ ಪುರಾಣದಿಂದ ಆಯ್ದುಕೊಂಡಿದ್ದನೆನ್ನಲಾಗಿದೆ. ಮೂಲ ನಾಟಕದಲ್ಲಿ ನಾಯಕಿ "ಎಲಿಝಾ ಡೂಓಲಿಟ್ಟಲ್" ಹೂ ಮಾರುವ ಹುಡುಗಿಯಾಗಿದ್ದು, ಈ ನಾಟಕದ ಮೊದಲ ಪ್ರದರ್ಶನವು 1913ರಲ್ಲಿ ಕಂಡಿದೆ.

ಈ ನಾಟಕದ ಆಧಾರದ ಮೇಲೆ ಮೈ ಫೇರ್ ಲೇಡಿ ಎಂಬ ಆಂಗ್ಲ ಸಿನಿಮಾ 1964ರಲ್ಲಿ ತೆರೆಗೆ ಬಂದು 8 ಆಸ್ಕರ್ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿತು. ಇದೇ ಸಿನಿಮಾವನ್ನು ಆಧರಿಸಿ ಡಾ. ಜಯಂತ್ ಕಾಯ್ಕಿಣಿ ಅವರು ನಮ್ಮ ನಾಡಿನ ಸಂಸ್ಕೃತಿ, ಪಾತ್ರ ಮತ್ತು ಸಂಭಾಷಣೆಯ ಸಹಜತೆಗೆ ಅನುಗುಣವಾಗಿ 'ಸೇವಂತಿ ಪ್ರಸಂಗ' ನಾಟಕವನ್ನು ರಚಿಸಿದ್ದಾರೆ.



ಈ ನಾಟಕವನ್ನು ಮೈಸೂರು ರಂಗಾಯಣದ ಮಂಜುನಾಥ ಬೆಳಕೆರೆ ಅವರ ನಿರ್ದೇಶನದಲ್ಲಿ ಸ್ಥಳೀಯ ಕಲಾವಿದರನ್ನೊಳಗೊಂಡ ತಂಡದಿಂದ ದೆಹಲಿ ಕರ್ನಾಟಕ ಸಂಘವು ನಿರ್ಮಿಸಿ ಎಪ್ರಿಲ್ 19 ರಂದು ಪ್ರಯೋಗಿಸಲಾಯಿತು.

ತಿಪ್ಪೆ ಕ್ರಾಸಿನಲ್ಲಿ ಪುಗ್ಗೆ (ಬಲೂನ) ಮಾರುವ ಸೇವಂತಿ ಭಾಷಾ ಅಧ್ಯಯನ ಮಾಡುವ ಭಾರ್ಗವ ಶಾಸ್ತ್ರಿ ಮತ್ತು ನಿವೃತ್ತ ಕ್ಯಾಪ್ಟನ್ ಕಲ್ಯಾಣಪುರ್‌ಕರ್ ಕಣ್ಣಿಗೆ ಬೀಳುತ್ತಾಳೆ. ಮೂವರ ಸಂಭಾಷಣೆಯಲ್ಲಿ ಸೇವಂತಿಯನ್ನು ಮಿಸ್ ಸೇವಂತಿಯಾಗಿ ಮಾಡುವೆನೆಂದು ಭಾರ್ಗವ ಶಾಸ್ತ್ರಿ ಪ್ರಸ್ತಾಪಿಸುವನು.


ಸೇವಂತಿಯು ಭಾರ್ಗವ ಶಾಸ್ತ್ರಿಯ ಮನೆ ಸೇರಿ ಕ್ಯಾಪ್ಟನ್ ಕಲ್ಯಾಣಪುರ್‌ಕರ್ ಪ್ರಯೋಗದಡಿ ಆರು ತಿಂಗಳಲ್ಲಿ ಮಿಸ್ ಸೇವಂತಿಯಾಗುವಳು. ಮೂವರ ಕನಸು ನನಸಾದರೂ ಭಾರ್ಗವಶಾಸ್ತ್ರಿಯ ಅಹಂ ಸೇವಂತಿಯ ಸ್ವಾಭಿಮಾನದ ಪರಿಣಾಮ ಸೇವಂತಿ ಮರಳಿ ಮತ್ತೆ ತಿಪ್ಪೇಕ್ರಾಸಿಗೆ ಸೇರುವಂತೆ ಆಗುತ್ತದೆ. ಆದರೆ ಅವಳು ತಿಪ್ಪೇಕ್ರಾಸಿನ ಎಲ್ಲ ಸಹಜ ಗುಣ ಕಳೆದುಕೊಂಡಿದ್ದರಿಂದ ಮಿಸ್ ಸೇವಂತಿ ಪಾತ್ರ ಕಳಚಿ ಮೂಲ ಸೇವಂತಿಯಾಗುವ ಸ್ಥಿತಿಯಲ್ಲಿರದ ದ್ವಂದ್ವದಲ್ಲಿರುತ್ತಾಳೆ.

ದೆಹಲಿಯಲ್ಲಿರುವ ಕನ್ನಡ ಹವ್ಯಾಸಿ ಕಲಾವಿದರ 22 ದಿನಗಳ ಶ್ರಮದ ಫಲ ನಾಟಕವು ಅದ್ಭುತ ಪ್ರದರ್ಶನವೆಂದು ಜನಮೆಚ್ಚುಗೆ ಪಡೆಯಿತು. ಅ

**ಮಹಾದೇವ**







# ಸೇವಂತಿ ಪ್ರಸಂಗ ನಾಟಕದ










# ದೃಶ್ಯಗಳು







# ಸೇವಂತಿ ಪ್ರಸಂಗ ಒಂದು ಅಪರೂಪದ ಅನುಭವ














ದೆಹಲಿ ಕರ್ನಾಟಕ ಸಂಘದ ಕಲಾವಿದರಿಂದಲೇ ಕೇವಲ 19 ದಿನಗಳೊಳಗೆ 20ಕ್ಕೂ ಮೇಲ್ಪಟ್ಟು ದೆಹಲಿಯ ಕಲಾವಿದರನ್ನು ಸೇರಿಸಿ ಇದೇ ಏಪ್ರಿಲ್ 19ರಂದು ಪ್ರಸ್ತುತಪಡಿಸಿದ ಒಂದು ಅಪ್ರತಿಮ ನಾಟಕ "ಸೇವಂತಿ ಪ್ರಸಂಗ". ಇದು ಮೂಲತಃ ಬರ್ನಾರ್ಡ್ ಷಾ ಅವರು ಬರೆದ ಆಂಗ್ಲ ಮೂಲದ ನಾಟಕ. ಇದೇ ನಾಟಕ ಲರ್ನರ್ ಇವರ ನಿರ್ದೇಶನದಲ್ಲಿ "ಮೈ ಫೇರ್ ಲೇಡಿ" ಎಂಬ ಹೆಸರಿನಲ್ಲಿ ಬೆಳ್ಳಿ ತೆರೆಯನ್ನು ಕಂಡ ಹೆಗ್ಗಳಿಕೆ ಹೊಂದಿದೆ. ಪ್ರಸ್ತುತ ಸಿನೇಮಾದಿಂದ ಪ್ರೇರಿತರಾಗಿ ಹೆಸರಾಂತ ಲೇಖಕರಾದ ಡಾ. ಜಯಂತ ಕಾಯ್ಕಿಣಿಯವರು 'ಸೇವಂತಿ ಪ್ರಸಂಗ' ಎಂದು ಕನ್ನಡಕ್ಕೆ ಅಳವಡಿಸಿದ್ದಾರೆ.ಇಂತಹ ಒಂದು ಉತ್ತಮವಾದ ನಾಟಕವನ್ನು ಆಯ್ದುಕೊಂಡು ಮೈಸೂರು ರಂಗಾಯಣದ ಹೆಸರಾಂತ ನಿರ್ದೇಶಕರಾದ ಮಂಜುನಾಥ ಬೆಳಕೆರೆಯವರು ರಂಗದ ಮೇಲೆ ತಂದಿದ್ದು ಶ್ಲಾಘನೀಯ.

ಈ ನಾಟಕದಲ್ಲಿ ಅಭಿನಯಿಸಿದ ಎಲ್ಲರೂ ಹವ್ಯಾಸಿ ಕಲಾವಿದರಾಗಿದ್ದರೂ ಮಂಜುನಾಥ ಬೆಳಕೆರೆಯವರಿಂದ ತರಬೇತಿಯನ್ನು ಹೊಂದಿ ಅಭಿನಯಿಸಿದ್ದಾರೆ. ಪಾತ್ರಧಾರಿಗಳಾದ ಸೇವಂತಿ–1 ರ ಪಾತ್ರದಲ್ಲಿ ಶಿಲ್ಪಾ ಹರಿಪ್ರಿಯಾ, ಸೇವಂತಿ–2ರ ಪಾತ್ರದಲ್ಲಿ ವಿದ್ಯಾ ಭಟ್, ಭಾರ್ಗವ ಶಾಸ್ತ್ರಿಯಾಗಿ ನಾರಾಯಣ ಬಿ., ಕಲ್ಯಾಣಪುರ್‌ಕರ್ ಪಾತ್ರದಲ್ಲಿ ಟಿ.ಎಂ. ಮೈಲಾರಪ್ಪ, ಜವರಣ್ಣನ ಪಾತ್ರದಲ್ಲಿ ಎ.ಟಿ. ಶ್ರೀನಿವಾಸ, ಪೆಂಟಯ್ಯನಾಗಿ ಆರ್.ಎಸ್. ಶ್ಯಾಮಸುಂದರ, ಚಾಯ್ ತಂಬಿಯಾಗಿ ಶಿವಪ್ಪ ಎಂ, ಸಿನಿಮಾ ಡೈರೆಕ್ಟರ್ ಸಹಾಯಕನಾಗಿ ವಿನೋದ ಕುಮಾರ್, ಪಟಾಲಮ್ಮನ ಪಾತ್ರದಲ್ಲಿ ಆಶಾಶ್ಯಾಮ್‌ಸುಂದರ್, ಸಿನಿಮಾ ನಿರ್ದೇಶಕನಾಗಿ ಪ್ರಕಾಶ ಶೆಟ್ಟಿ ಉಳೆಪಾಡಿ, ಶ್ರೀಮಂತ ಮಹಿಳೆಯಾಗಿ ಶೈಲಾ ಕುಮಾರ್, ಚನ್ನಮ್ಮನ ಪಾತ್ರದಲ್ಲಿ ದೀಪಾ ಶಿವಪ್ಪ, ಮಾದಮ್ಮನಾಗಿ ಮಂಜುಳಾ ನಾಗರಾಜ, ಕೊಳಗೇರಿ ಜನ/ಪೂಜೆ ಭಟ್ಟರಾಗಿ ಡಾ. ಎಂ.ಕೆ. ಧೀರೇಂದ್ರ ರಾವ್, ದಾರಿಹೋಕನಾಗಿ ಡಾ. ಎಂ. ನಾರಾಯಣ ಭಟ್, ಕೊಳೆಗೇರಿ ಹುಡುಗಿಯಾಗಿ ಕುಮಾರಿ ಕೆ. ಆರ್. ಸಾನ್ವಿ ಕುಮಾರ್ ಹಾಗೂ ಶ್ರೀಮಂತ ಹೆಂಗಸಿನ ಮಗನಾಗಿ ಕುಮಾರ್ ಅಭಿಷೇಕ್ ಎಸ್. ಇವರೆಲ್ಲರ ನಟನೆ ಅದ್ಭುತವಾಗಿ ಮೂಡಿ ಬಂದಿದೆ. ಆದರೂ ಸೇವಂತಿ–1 ರ ಪಾತ್ರದಲ್ಲಿ ನಟಿಸಿದ ಶಿಲ್ಪಾ ಹರಿಪ್ರಿಯ ಅವರ ಅಭಿನಯ ನುರಿತ ಕಲಾವಿದರ ಅಭಿನಯವನ್ನು ಮೀರಿಸುವಂತಿತ್ತು. ಪಟಾಲಮ್ಮನ ಪಾತ್ರದಲ್ಲಿ ಮಾತಿಲ್ಲದಿದ್ದರೂ ಅಭಿನಯ ಶ್ಲಾಘನೀಯ. ಒಟ್ಟಾಗಿ ಹೇಳುವುದಾದರೆ ಮಂಜುನಾಥ ಬೆಳೆಕೆರೆಯವರ ಶ್ರಮ ಸಾರ್ಥಕವೆಂದೆನಿಸಿ ದೆಹಲಿ ಕನ್ನಡಿಗರಿಗೆ ಇದೊಂದು ಮನ ಸೆಳೆಯುವಂತಹ ನಾಟಕವಾಗಿ ಮೂಡಿಬಂದಿದೆ.

ಇನ್ನು ಬೆಳಕಿನ ವಿನ್ಯಾಸದಲ್ಲಿ ಶಿವಾನಂದ ಇಂಗಳೇಶ್ವರ ಅವರು ತಮ್ಮ ಅಪ್ರತಿಮ ವಿನ್ಯಾಸವನ್ನು ಮೆರೆದಿದ್ದಾರೆ. ರಂಗ ವಿನ್ಯಾಸ ಅಲಂಕಾರ ಮತ್ತು ಕಲಾ ಸಂಯೋಜನೆಯಲ್ಲಿ ಸುಧೀರ್ ಫಡ್ನೀಸ್ ಅವರು ಅಪ್ರತಿಮ ಕಲಾಪ್ರತಿಮೆಯನ್ನು ತೋರಿಸಿ ಕಲಾಭಿಮಾನಿಗಳನ್ನು ಮಂತ್ರಮುಗ್ಧರನ್ನಾಗಿ ಮಾಡಿದ್ದಾರೆ.

ದೆಹಲಿ ಕರ್ನಾಟಕ ಸಂಘದ ಕಲಾವಿದರಿಂದಲೇ ಒಂದು ಒಳ್ಳೆಯ ನಾಟಕವನ್ನು ರಂಗಕ್ಕೆ ತಂದು ತೋರಿಸಬೇಕು ಎನ್ನುವ ಸಂಘದ ಅಧ್ಯಕ್ಷರಾದ ವಸಂತ ಶೆಟ್ಟಿ ಬೆಳ್ಳಾರೆಯವರ ಕನಸು ನನಸಾಗಿದೆ. ಜತೆಗೆ ಸಂಘದ ಪದಾಧಿಕಾರಿಗಳು ಸಹಕರಿಸಿದ್ದಾರೆ. ಈ ರೀತಿಯ ಪ್ರಯೋಗಗಳು ಮತ್ತೆ ಮತ್ತೆ ಮೂಡಿ ಬರಲಿ. ಅ

***ಶಶಿಧರ ಮುನವಳ್ಳಿ***



ಮಂಗಳೂರಿನ ಖ್ಯಾತ ಬಾಯ್ ಝೋನ್ ತಂಡದ ಮೂವರು ಸದಸ್ಯರು ಕಿಶೋರ್, ಮೋಹನ್ ಮತ್ತು ಸೋಹನ್ ಮಾರ್ಚ್ 22 ರಿಂದ ಒಂದು ವಾರಗಳ ಸತತ ತರಬೇತಿ ನಂತರ ಮಾರ್ಚ್ 29ರಂದು ಸುಮಾರು 90 ಸ್ಥಳೀಯ ಕಲಾವಿದರು ವಿವಿಧ ತಂಡಗಳಲ್ಲಿ ಕಂಟೆಂಪರರಿ, ಕ್ಲಾಸಿಕಲ್, ಹಿಪ್‌ಆಪ್ ಹಾಗೂ ಇನ್ನೂ ವಿವಿಧ ನೃತ್ಯ ಪ್ರಕಾರಗಳನ್ನು ಪ್ರಸ್ತುತಪಡಿಸಿದರು. ಈ ನೃತ್ಯ ಕಾರ್ಯಾಗಾರ ದೆಹಲಿ ಕರ್ನಾಟಕ ಸಂಘವು ಆಯೋಜಿಸಿತ್ತು. ಈ ತರಬೇತಿಯ ಸಂಯೋಜನೆ ಹಾಗೂ ಶ್ರೀಮತಿ ಪೂಜಾಪ್ರದೀಪ್ ಅವರೊಟ್ಟಿಗೆ ನಿರ್ವಹಣೆಯನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟವರು ಶ್ರೀಮತಿ ಆಶಾಲತಾ ಮಹಾದೇವ. ಆಧುನಿಕ ಮತ್ತು ಭಾರತೀಯ ಸಂಸ್ಕೃತಿಯ ಚರ್ಚೆ, ಹಾಡು ಮತ್ತು ನೃತ್ಯಕ್ಕೆ ಪೂರಕವಾಗುವಂತೆ ವಿನೂತನ ಶೈಲಿಯಲ್ಲಿ ಇಬ್ಬರ ನಿರೂಪಣೆ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು.

ಸ್ಥಳೀಯ ಕಲಾವಿದರಲ್ಲದೆ ಬಾಯ್ ಝೋನ್ ತಂಡದವರಿಂದಲೂ ಕೆಲ ನೃತ್ಯಗಳ ಪ್ರದರ್ಶನ ನಡೆಯಿತು. ಒಟ್ಟಾರೆ ಒಂದು ವಾರದ ಸತತ ಪರಿಶ್ರಮ, ರಂಗದ ಮೇಲೆ ಸ್ಥಳೀಯ ಪ್ರತಿಭೆಗಳ ಪ್ರತಿಭಾ ಪ್ರದರ್ಶನಕ್ಕೆ ಜನಮಾನಸದ ಅಪಾರ ಮೆಚ್ಚುಗೆ ವ್ಯಕ್ತವಾಯ್ತು. ಈ ನೃತ್ಯಕ್ಕೆ ಕನ್ನಡ, ಹಿಂದಿ ಹಾಡುಗಳನ್ನು ಮತ್ತು ಪಾಶ್ಚಾತ್ಯ ಸಂಗೀತ ಬಳಸಿದ್ದು ಯುವ ಕನ್ನಡ ಮನಸ್ಸುಗಳನ್ನು ಸಂಘದತ್ತ ಸೆಳೆಯುವಲ್ಲಿ ಈ ನೃತ್ಯ ಕಾರ್ಯಾಗಾರ ಸೇತುವೆಯಾಗಿ ಕೆಲಸ ಮಾಡಿದೆ ಎನ್ನಲಡ್ಡಿಯಿಲ್ಲ. ಈ ಕಾರ್ಯಾಗಾರದಲ್ಲಿ 5ವರ್ಷದ ಮಕ್ಕಳಿಂದ 60 ವರ್ಷದ ವಯೋಮಾನದ ಕಲಾವಿದರು ಭಾಗಿಯಾಗಿದ್ದು ಕಾರ್ಯಕ್ರಮಕ್ಕೆ ಒಂದು ವಿಶೇಷ ಕಳೆ ಕಟ್ಟಿಕೊಟ್ಟಿತ್ತು.

ಅಂತಿಮವಾಗಿ ಕನ್ನಡ ಚಲನಚಿತ್ರ ಗೀತೆಗಳಾದ ಕಲ್ಲಾದರೆ ನಾನು ಬೇಲೂರಿನ ಗುಡಿಯಲಿ ಇರುವೆ, ಈ ಕನ್ನಡ ಮಣ್ಣನು ಮರಿಬೇಡ ಓ ಅಭಿಮಾನಿ ಹಾಗೂ ಕರುನಾಡೇ ಕೈ ಚಾಚಿದೆ ನೋಡೆ ಗೀತೆಗಳಿಗೆ ಎಲ್ಲ ತಂಡಗಳೂ ನರ್ತಿಸುತ್ತ ರಂಗದ ಮೇಲೆ ತಮ್ಮ ರಂಗನಮನ ಪ್ರಸ್ತುತಪಡಿಸಿದ ಸಂದರ್ಭದಲ್ಲಿ ಇಡೀ ರಂಗಮಂಚ ಸ್ಥಳೀಯ ಪ್ರತಿಭೆಗಳಿಂದ ತುಂಬಿ ತುಳುಕಾಡುತ್ತಿತ್ತು. ದೆಹಲಿ ಕರ್ನಾಟಕ ಸಂಘದ ರಂಗ ಮಂಚ ಚಿಕ್ಕದಾಯ್ತೆನೋ ಅನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದರಲ್ಲಿ ಭಾಗಿಯಾದ ಕಲಾವಿದರು ಇಂತಿದ್ದಾರೆ.

ಪ್ರೋಗ್ ಡಾನ್ಸ್ : ಅವನಿ ನೆಲ್ಲಿ, ಧನ್ವಿನ್, ಲಿಪಿಕ, ಸೃಜನ್, ಮದುಸೂಧನ್, ಸಾತ್ವಿಕ್, ಮನೀಶ್‌ಧರ್ಮ, ಹರೀಶ್ ಗೌಡ, ಜಯಶ್ರೀ, ಅಭಿಷೇಕ್, ಸಾನ್ವಿ, ಅನನ್ಯ ಮತ್ತು ಓಶಿನ್ ಮುರಗೋಡ.

ಪಂಜಾಬಿ : ಕುಶಲ್ ಗೌಡ, ಗೌತಮ್, ಕ್ಷಿತಿಜ್, ನವ್‌ಯುಗ್, ಶ್ರೀಧನ್ ಮೂರ್ತಿ, ಸೃಜನ್, ಲಿಖಿತ್ ಮಹದೇವ್

ಬಾಲಿವುಡ್ ಲೇಡಿಸ್ ಗಾಗ್ರ : ಸುಮಿತಾ ಆನಂದ್, ಮೀನಾ ವಸಂತ್, ಪ್ರತಿಭಾ ಗೌಡ, ಶೋಭಾ ಗೌಡ, ಗಿರಿಜಾ ಶ್ರೀನಿವಾಸ್

ಫೋಕ್ ಡಾನ್ಸ್ : ಜಮುನಾ ಮಠದ, ವೃಂದಾ ಚಿಕ್ಕೆರೂರು, ಶಾಲನ್ ಮುರಗೋಡ, ರಾಜ್‌ಕುಮಾರ್, ಶಿವಪ್ಪ

ಗುಜರಾತಿ : ಶ್ರೇಷ್ಠ ತೇಲಿ, ಶ್ರೇಯ ತೇಲಿ, ಸಿಂಚನಾ ಮೂರ್ತಿ,

ರಾಷ್ಟ್ರೀಯ ಏಕತೆ

ಕಾಶ್ಮೀರಿ : ಯಶಸ್ವಿನಿ, ಪ್ರಿಯಾಂಕ, ರಮ್ಯ

ಕರ್ನಾಟಕ : ದರ್ಶನ, ಭುವನ್, ಅಬಿಷೇಕ್, ಹೃತ್ವಿಕ್, ಶಾಶ್ವತ್, ಲಕ್ಷಯ್, ಶರಣ್ಯ, ರಿಷಿ, ಕೃಷ್ಣ

ಕೇರಳ : ವಿಸ್ಮಯ, ಲಿಖಿತ, ಅನನ್ಯ ಆರ್.ಕೆ., ಭಾಗ್ಯಶ್ರೀ

ಮಹಾರಾಷ್ಟ್ರ : ರಚನಾ, ಪ್ರೇರಣಾ, ಶೀರಿನಾ

ಹಿಪ್ ಆಪ್ : ಸವಿತಾ ನೆಲ್ಲಿ, ವಂದನಾ ಶೆಟ್ಟಿ, ಪ್ರಶಾಂತ್, ವಿನೋದ, ಅನ್‌ಮೋಲ್, ಆಕಾಶ್, ಮಂಜುನಾಥ್, ಪ್ರವೀಣ್ ಬಾಲಚಂದ್ರ, ಕೃಷ್ಣ, ಜಸ್ವಂತ್

ಮೈಕಲ್ ಜಾಕ್ಸನ್ ಲೀರಿಕಲ್ : ಐಶ್ವರ್ಯ, ಸಿಂಚನಾ, ಶ್ವೇತಾ, ಮಧು, ಸೌಂದರ್ಯ, ಪ್ರೇಮ, ಮಧುಶ್ರೀ, ಆಕಾಂಕ್ಷ, ನಂದಿನಿ, ರಾಜೇಶ್ವರಿ, ಶರಣ್ಯ

ಟಪೋರಿ ಡಾನ್ಸ್ : ಕಾವ್ಯ ಶ್ರೀನಿವಾಸ್, ಚಂದನಾ ಗೌಡ, ಐಶ್ವರ್ಯ ಮೇಟಿ, ಓಶೋ ಮುರಗೋಡ, ಮನೋಹರ, ಮೌರ್ಯ ಪಿ.ಸಿ. ಶ್ರೀನಿವಾಸ, ಸುಹಿತ್ ವಸಂತ್

ಸುಪ್ರಭಾತ : ಅನನ್ಯ ನಾಗರಾಜ, ರಕ್ಷಿತಾ, ಪುಷ್ಪ, ಶ್ರೀವಿದ್ಯಾ, ಕವನ, ಪೃಥ್ವಿ, ಶ್ರೇಯ, ಯಶಸ್ವಿನಿ ಗೌಡ

ಕನ್ನಡ : ಅನನ್ಯ ನಾಗರಾಜ, ರಕ್ಷಿತಾ, ಪುಷ್ಪ, ಕವನ, ಪೃಥ್ವಿ, ಶ್ರೇಯ, ರಚನ, ರಮ್ಯ, ಪ್ರಿಯಾಂಕ, ಕುಶಲ್ ಗೌಡ, ಲಿಖಿತ್, ಶಿರಿನ್, ಪ್ರೇರಣಾ ರಾವ್, ಯಶಸ್ವಿನಿ, ಶ್ರೀವಿದ್ಯಾ.

ಸೆಮಿಕ್ಲಾಸಿಕಲ್ : ಶೋಭಾ ನಾಗರಾಜ, ಮಂಜುಳಾ ನಾಗರಾಜ, ತಾರಾ ರಮೇಶ್, ರೂಪಶ್ರೀ, ಶೈಲಾಕುಮಾರ್, ದೀಪಾ ಶಿವಪ್ಪ.

ಬಾಲಿವುಡ್ : ಸೀಮಾ ಬಿರಾದಾರ, ಶಿಲ್ಪ ಹರಿಪ್ರಿಯ, ಜಯಲಕ್ಷ್ಮೀರಾಜಕುಮಾರ್, ಜಯಶ್ರೀನಿವಾಸ, ದಿವ್ಯ ಮತ್ತು ಶಾಂತಿ ಶ್ರೀನಿವಾಸ ಅ

*ಹರಿ ಪ್ರಿಯ ಎಸ್.*

## 5 ವರ್ಷದಿಂದ 60ವರ್ಷದ ಸ್ಥಳೀಯ ಪ್ರತಿಭೆಗಳ ವಿವಿಧ ನೃತ್ಯ ಪ್ರದರ್ಶನ



# ಅಪ್ರತಿಮ ಪ್ರತಿಭೆಯ ಅನನ್ಯಳ ರಂಗ ಪ್ರವೇಶ

ಗುರು ವಿದ್ವಾನ್ ಕೋಲಾರ್ ರಮೇಶ್ ಅವರ ಶಿಷ್ಯೆ ಕುಮಾರಿ ಅನನ್ಯಳ ರಂಗಪ್ರವೇಶವು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಕಿಕ್ಕಿರಿದು ಸೇರಿದ ಕಲಾಭಿಮಾನಿಗಳು, ಹಿರಿಯ ಅಧಿಕಾರಿಗಳು ಮತ್ತು ಧಾರ್ಮಿಕ ಗುರುಗಳ ಸಮ್ಮುಖದಲ್ಲಿ ಅತ್ಯಂತ ಪ್ರೌಢ ನೃತ್ಯಗಳ ಮೂಲಕ ಇದೇ ಎಪ್ರಿಲ್ 26ರಂದು ನಡೆಯಿತು.

ಸಮಾರಂಭದ ಮುಖ್ಯ ಅತಿಥಿಯಾಗಿ ಬಂದಿದ್ದ ಜಗದ್ಗುರು ಸ್ವಾಮಿ ನಿರ್ಮಾಲಾನಂದರು ಅನನ್ಯಳು ತನ್ನ ಹೆಸರಿಗೆ ಅನ್ವರ್ಥವೆಂಬಂತೆ ಅಭಿನಯದ ಚಾತುರ್ಯದಲ್ಲಿ ಅನನ್ಯಳು ಎಂದರು. ರಾಜ್ಯಸಭಾ ಸದಸ್ಯ ಶ್ರೀ ಆಸ್ಕರ್ ಫರ್ನಾಂಡಿಸ್ ಅವರು ಮಾತನಾಡಿ ಅನನ್ಯಳ ಅಭಿನಯ ಅನುಕರಣೀಯ ಎಂದರು.

ನ್ಯಾಯಧೀಶರಾದ ಶ್ರೀ ಎ.ಎಸ್. ಜಯಚಂದ್ರ, ಶ್ರೀ ರಘುಪತಿ, ಶಾಸಕರಾದ ಶ್ರೀ ಜಿ. ಮಂಜುನಾಥ ಕೊತ್ತನೂರು, ಸೆಂಟ್ರಲ್ ಸಿಲ್ಕ್ ಬೋರ್ಡ್‌ನ ಅಧ್ಯಕ್ಷರಾದ ಶ್ರೀ ಬಿಸ್ಸೇಗೌಡ, ಶ್ರೀಮತಿ ಧನಲಕ್ಷ್ಮೀ, ಐ.ಎ.ಎಸ್., ಡಿ.ಎಂ. ಭಾಗ್‌ಪತ್ ಡಿ.ಸಿ., ಸಿ.ಬಿ.ಐ. ಅಧಿಕಾರಿ ಶ್ರೀ ರಾಜಶೇಖರ್ ಐ.ಪಿ.ಎಸ್., ನಿವೃತ್ತ ಐ.ಎ.ಎಸ್. ಅಧಿಕಾರಿ ಶ್ರೀ ಎನ್. ಜೆ.ಕಾಮತ್, ಡಿ.ಸಿ.ಪಿ. ಶ್ರೀ ಬಿ.ಎಲ್. ಸುರೇಶ್, ಶ್ರೀ ಐ. ರಾಮಮೋಹನ ರಾವ್, ಗ್ರಾಹಕರ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀ ಎಸ್. ಎಂ. ಕಂಠೀಕರ್, ಅಧ್ಯಕ್ಷರು, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮೊದಲಾದ ಗಣ್ಯರು ಅನನ್ಯಳ ನೃತ್ಯವನ್ನು ನೋಡಿ ಅವಳ ಶ್ರೇಯೋಭಿವೃದ್ಧಿಯನ್ನು ಬಯಸಿ ಹರಸಿದರು.





ಪುಷ್ಪಾಂಜಲಿಯೊಂದಿಗೆ ಪ್ರಾರಂಭವಾದ ಅನನ್ಯಳ ರಂಗಪ್ರವೇಶವು ಅರಿಪು, ಜತಿಸ್ವರ, ಶಬ್ದಂ, ವರ್ಣ, ದೇವರನಾಮದೊಂದಿಗೆ ಮುಂದುವರೆದು ತಿಲ್ಲಾನದೊಂದಿಗೆ ಮುಕ್ತಾಯವಾಯಿತು. ಭರತ ನಾಟ್ಯದ ಎಲ್ಲಾ ನೃತ್ಯಗಳನ್ನು ಬಹಳಷ್ಟು ಚಾತುರ್ಯದಿಂದ ನಡೆಸಿಕೊಟ್ಟಳು.

ಈಕೆಯ ನೃತ್ಯಕ್ಕೆ ಹಾಡುಗಾರಿಕೆಯಲ್ಲಿ ವಿದುಷಿ ವಸುಧ ಬಾಲಕೃಷ್ಣ ಉತ್ತಮ ಮೆರಗು ನೀಡಿದರು. ಸಾಥಿಗಳಾಗಿ ನಟ್ಟುವಾಂಗದಲ್ಲಿ ವಿದ್ವಾನ್ ಕೋಲಾರ್ ರಮೇಶ್, ಮೃದಂಗದಲ್ಲಿ ವಿದ್ವಾನ್ ನಟರಾಜ್, ಪಿಟೀಲು ವಾದನದಲ್ಲಿ ವಿದ್ವಾನ್ ಸುಬ್ರಮಣ್ಯ, ಕೊಳಲು ವಾದನದಲ್ಲಿ ವೀಂಜಾರು ಎಂ.ಜಯರಾಂ ಸಹಕಾರ ನೀಡಿದರು. ಈಕೆಯ ಪ್ರಸಾದನವನ್ನು ಅಂತರಾಷ್ಟ್ರೀಯ ಕಲಾವಿದ ಇಲಂಗೋವನ್ ಮಾಡಿದರು. ಕಾರ್ಯಕ್ರಮ ನಿರೂಪಣೆಯನ್ನು ಕಲಾದೇಗುಲ ಶ್ರೀನಿವಾಸ್ ನಡೆಸಿಕೊಟ್ಟರು. ವಿಭಿನ್ನ ರಂಗ ಸಜ್ಜಿಕೆ ಮತ್ತು ಉತ್ತಮ ಬೆಳಕು ನೃತ್ಯ ಕಾರ್ಯಕ್ರಮಕ್ಕೆ ಮೆರುಗನ್ನು ನೀಡಿದವು. ಅನನ್ಯಳ ಗುರು ವಿದ್ವಾನ್ ಕೋಲಾರ್ ರಮೇಶ್ ಅವರು ಕೋಲಾರದ ಸಣ್ಣ ಗ್ರಾಮದಲ್ಲಿ ಜನಿಸಿ ಇಂದು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಮೂರು ಸಾವಿರಕ್ಕೂ ಹೆಚ್ಚು ಕಾರ್ಯಕ್ರಮ ನೀಡಿದ್ದಾರೆ.

ದೆಹಲಿಯಲ್ಲಿ ಪೋಲೀಸ್ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ದೆಹಲಿ ಕರ್ನಾಟಕ ಸಂಘದ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ್ ಮತ್ತು ಶ್ರೀಮತಿ ಶೋಭಾ ಅವರ ಸುಪುತ್ರಿ ಕುಮಾರಿ ಅನನ್ಯಳು ತನ್ನ ರಂಗಪ್ರವೇಶಕ್ಕೆ ಮೊದಲೇ ಹಲವಾರು ಕಾರ್ಯಕ್ರಮಗಳನ್ನು ನೀಡಿದ್ದಾಳೆ. ದೇಶದ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರಿಂದ ಇದೇ ಜನವರಿಯಲ್ಲಿ ನಡೆದ ಸಂಕ್ರಾಂತಿ ಸಂಭ್ರಮದಲ್ಲಿ ಮೆಚ್ಚುಗೆ ಗಳಿಸಿದ್ದಾಳೆ. ನಾಡಪ್ರಭು ಕೆಂಪೇಗೌಡ ರಾಷ್ಟ್ರೀಯ ಉತ್ಸವದಲ್ಲಿ ಕಾರ್ಯಕ್ರಮ ನೀಡಿದ್ದಾಳೆ. ದೆಹಲಿಯಲ್ಲಿ ನಡೆದ ಕುವೆಂಪು ಜನ್ಮದಿನ, ಮಾಸ್ತಿ ಮತ್ತು ಡಿವಿಜಿಯವರ ಸಮಗ್ರನೋಟದ ಕಾರ್ಯಕ್ರಮ, ಬೆಂಗಳೂರಿನಲ್ಲಿ ನಡೆದ ಮಾಸ್ತಿ ಪ್ರಶಸ್ತಿ ಪ್ರಧಾನ ಸಮಾರಂಭ, ಕೋಲಾರದಲ್ಲಿ ನಡೆದ ಮಾಸ್ತಿ ಜನ್ಮದಿನ, ಕನ್ನಡ ಸಾಹಿತ್ಯ ಸಮ್ಮೇಳನ ಮೊದಲಾದ ಪ್ರತಿಷ್ಠಿತ ಕಾರ್ಯಕ್ರಮಗಳಲ್ಲಿ ಕುಮಾರಿ ಅನನ್ಯ ಅದ್ಭುತವಾದ ಪ್ರತಿಭೆ ತೋರಿಸಿದ್ದಾಳೆ. ಅ

*ಅಭಿಮತ ವರದಿ*

# ಪಕ್ವ ವಿಮರ್ಶೆಗಳ ಸ್ಪಷ್ಟದನಿ


ಜನಸಂಸ್ಕೃತಿಯ ಆಳವಾದ ಅಧ್ಯಯನಗಳ ಕುರಿತು, ಜಾನಪದ ಜಗತ್ತಿನ ಕುರಿತು ಮತ್ತು ಸಾಹಿತ್ಯ ವಿಮರ್ಶೆಯ ಕುರಿತು ಹಲವು ಕೃತಿಗಳನ್ನು ಬರೆದಿರುವ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಅವರ ಇತ್ತೀಚಿನ ಕೃತಿ 'ಮೆಲುದನಿ' ಹೊಸಕೋಟೆಯ ಯಾಜಿ ಪ್ರಕಾಶನದ ಮೂಲಕ ಪ್ರಕಟಗೊಂಡಿದೆ. ನಲ್ವತ್ತೆರಡು ಅತ್ಯಮೂಲ್ಯ ವಿಮರ್ಶಾ ಲೇಖನಗಳ ಈ ಹೊಸ ಪುಸ್ತಕ ಕನ್ನಡದ ಸಾಹಿತ್ಯಾಭ್ಯಾಸಿಗಳಿಗೆ ಉತ್ತಮ ರೆಫರೆನ್ಸ್ ಕೃತಿಯಾಗಲಿದೆ.

ಡಾ. ಶಿವರಾಮ ಕಾರಂತ, ಗೌರೀಶ ಕಾಯ್ಕಿಣಿ, ದೇವನೂರ ಮಹಾದೇವ ಮುಂತಾದ ಕನ್ನಡ ಸಾಹಿತ್ಯದ ಮೇರು ದಿಗ್ಗಜರ ಕೃತಿಗಳ ವಿಮರ್ಶೆ ಮತ್ತು ಬರವಣಿಗೆಗಳ ವಿಶ್ಲೇಷಣೆಯ ಜತೆಗೆ ಹೊಸದಾಗಿ ಬರೆಯಲು ಆರಂಭಿಸಿದ ಬರಹಗಾರರ ಮೊದಲ ಕೃತಿಗಳ ಕುರಿತು ಒಳನೋಟಗಳು ಮತ್ತು ಅವು ಹಿಡಿಯಲಿರುವ ಮುಂದಿನ ದಾರಿಯ ಕುರಿತು ಸ್ಪಷ್ಟ ದಿಕ್ಸೂಚಿಯನ್ನು ತೋರಿಸುವ ಮುನ್ನುಡಿಯ ಹಾರೈಕೆಗಳ ನುಡಿಗಳು ಈ ಕೃತಿಯಲ್ಲಿವೆ.


ಡಾ. ಪುರುಷೋತ್ತಮ ಬಿಳಿಮಲೆ ಅವರು ಕನ್ನಡ ಮಾತುಗಳನ್ನು ಆಡುವ, ಕನ್ನಡದಲ್ಲಿ ಬರೆಯುವ ಮತ್ತು ಕನ್ನಡದಲ್ಲಿ ಓದುವ ಪರಿಸರದಿಂದ ಸಾವಿರಾರು ಕಿಲೋ ಮೀಟರ್ ದೂರದಲ್ಲಿದ್ದು ಕನ್ನಡ ಸಾಹಿತ್ಯಲೋಕದಲ್ಲಿ ನಡೆಯುತ್ತಿರುವ ಚರ್ಚೆಗಳಲ್ಲಿ ಮುಕ್ತವಾಗಿ ಭಾಗವಹಿಸುತ್ತಿದ್ದಾರೆ. ಅವರ ಇಂತಹ ಅನುಭವದ ಪಕ್ವತೆಗೆ ಒಳಗಾದ ವಿಮರ್ಶೆಗಳು ಮತ್ತು ಅವರು ಬರೆದಿರುವ ಮುನ್ನುಡಿಗಳು ಕೃತಿಯನ್ನು ಆಸಕ್ತಿಯಿಂದ ಓದಿಸುವಂತೆ ಮಾಡುತ್ತವೆ.

ಹೊಸ ಬರಹಗಾರರ ಕೃತಿಗಳಿಗೆ ಮುನ್ನುಡಿ ಬರೆಯುವಾಗ ಅವರು ಅತ್ಯಂತ ಜಾಗರೂಕರಾಗಿರುತ್ತಾರೆ. ಡಾ. ಬಿಳಿಮಲೆ ಅವರ ಮೇಲಿನ ಅಭಿಮಾನದಿಂದ ಹೊಸಪುಸ್ತಕದ ಹಸ್ತಪ್ರತಿಯನ್ನು ಅವರಿಗೆ ಕೊಟ್ಟು ಅವರಿಂದ ಅದನ್ನು ಓದಿಸಿ ಅವರಿಂದಲೇ ಮುನ್ನುಡಿ ಬರೆಸುವ ಒತ್ತಾಸೆ ಬಹಳಷ್ಟು ಹೊಸ ಬರಹಗಾರರಲ್ಲಿರುತ್ತದೆ. ಆದರೆ ಡಾ. ಬಿಳಿಮಲೆ ಅವರು ಹಸ್ತಪ್ರತಿ ಹೊಸ ಬರಹಗಾರನದು ಎಂದು ಪರಿಗಣಿಸದೇ, ಗಂಭೀರ ಅಧ್ಯಯನದ ಮೂಲಕ ಸಾಹಿತ್ಯಿಕ ಮೌಲ್ಯಗಳನ್ನು ಕೃತಿಗಳಲ್ಲಿ ಗುರುತಿಸಿ, ಉತ್ತಮ ಗುಣಗಳನ್ನು ಧಾರಾಳವಾಗಿ ವಿವರಿಸಿ, ಕೃತಿಗಳಲ್ಲಿ ಕಂಡುಬರುವ ಲೋಪದ ಅಂಶಗಳನ್ನು ಅತ್ಯಂತ ಮೆಲುದನಿಯಿಂದ ಹೇಳುತ್ತಾರೆ. ಅವರ ಮೆಲುದನಿಯ ಒಳಾರ್ಥಗಳನ್ನು ಅರಿತು ಸಾಹಿತ್ಯ ಕೃಷಿಯನ್ನು ಮುಂದುವರಿಸುವ ಬರಹಗಾರ ಮುಂದೆ ಉತ್ತಮ ಬರಹಗಾರನಾಗದೇ ಇರಲಾರ.

ರಾಘವೇಂದ್ರ ಪಾಟೀಲ, ಬೆಸಗರಹಳ್ಳಿ ರಾಮಣ್ಣ, ಯಶವಂತ ಚಿತ್ತಾಲ ಅವರ ಕತೆಗಳನ್ನು ಓದಿ ಅವುಗಳಲ್ಲಿರುವ ಸಾಹಿತ್ಯಿಕ ಸೌಂದರ್ಯ, ಪ್ರತಿಮೆಗಳ ಒಳಾರ್ಥ, ಪ್ರತಿಪಾದಿಸುವ ಚಿಂತನೆ ಮತ್ತು ಕಾಲದ ನೆಲೆಯಲ್ಲಿ ಅವುಗಳ ಮಹತ್ವವನ್ನು ಅರಿಯಬೇಕಾದರೆ ಈ ಲೇಖಕರ ಕುರಿತು ಡಾ. ಬಿಳಿಮಲೆಯವರು ಬರೆದ ಬರಹಗಳನ್ನು ಈ ಕೃತಿಯಲ್ಲಿ ಓದಬೇಕು. ಡಾ. ಬಿಳಿಮಲೆಯವರು ತಮ್ಮ ಅಪಾರವಾದ ಸಾಹಿತ್ಯಿಕ ಓದಿನ ಪರಿಧಿಯಲ್ಲಿ ಕೃತಿಗಳನ್ನು ವಿಮರ್ಶಿಸುತ್ತಾರೆ. ಉದಾಹರಣೆಗೆ, ಮಲ್ಲಿಕಾರ್ಜುನ ಹಿರೇಮಠ ಅವರ ಕತೆಗಳ ಕುರಿತು ಬರೆಯುವಾಗ ಡಾ. ಬಿಳಿಮಲೆಯವರು ಯಶವಂತ ಚಿತ್ತಾಲರ 'ಆಟ' ಕತೆಯ ಕುರಿತು ಬರೆಯುತ್ತಾರೆ.




**ಡಾ. ಬಿಳಿಮಲೆಯವರ ವಿಮರ್ಶಾ ಲೇಖನಗಳು ಸಾಹಿತ್ಯದ ಗಂಭೀರ ವಿದ್ಯಾರ್ಥಿಗಳಿಗೆ ಹೇಗೆ ಬಹಳ ಉಪಯುಕ್ತವಾಗಲಿವೆಯೋ ಅದೇ ರೀತಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಹೊರನೋಟವನ್ನು ಅರಿಯುವವರಿಗೂ ದಾರಿದೀಪವಾಗಲಿದೆ**



ಮೊಗಳ್ಳಿ ಗಣೇಶ್ ಅವರ 'ಬುಗುರಿ', ಅಮರೇಶ ನುಗಡೋಣಿಯವರ 'ಹೆಜ್ಜೆ ಮೂಡದ ಹಾದಿ' ಬಿ.ಎಂ. ರಶೀದರ 'ಹೆಲಿಪೆಟ್ಟರ್' ಕತೆಯ ಪಾತ್ರಗಳನ್ನು ತುಲನೆ ಮಾಡುತ್ತಾರೆ. ಒಂದು ಕೃತಿಯ ಕುರಿತು ಬರೆಯುವಾಗ ಮತ್ತೊಂದು ಕೃತಿಯಲ್ಲಿ ಇಂತಹದೇ ಆಸಕ್ತ ವಿಷಯಗಳಿರುವುದನ್ನು ತಿಳಿಸಿ ಸಾಹಿತ್ಯದ ಓದುಗನು ಇನ್ನಷ್ಟು ಓದುವಂತೆ ಪ್ರೇರೆಪಿಸುತ್ತಾರೆ. ಒಬ್ಬ ಗಟ್ಟಿ ವಿಮರ್ಶಕನ ಇಂತಹ ಪ್ರೇರಣೆಗಳೇ ಸಾಹಿತ್ಯದ ಬೆಳವಣಿಗೆಗೆ ಪೂರಕವಾಗುತ್ತವೆ.

ಬಹುತೇಕ ಮುನ್ನುಡಿಗಳು ಇಂದು ಕೃತಿಯಲ್ಲಿ ಇಲ್ಲದ ಮೌಲ್ಯಗಳನ್ನು ಹುಡುಕುತ್ತಾ, ಹೊಸ ಪುಸ್ತಕಗಳ ಮಾರುಕಟ್ಟೆಯಲ್ಲಿ ಪ್ರಚಾರದ ಪಾತ್ರೆಗಳನ್ನು ವಹಿಸುತ್ತಿವೆ. ಆದರೆ ಡಾ. ಬಿಳಿಮಲೆಯವರು ಮುನ್ನುಡಿ ಬರೆಯುವಾಗ ಆ ಕೃತಿಯ ಸಮಗ್ರ ಮತ್ತು ಗಂಭೀರ ಓದಿನ ಜತೆಗೆ ಕೃತಿಯ ವಸ್ತು ಮತ್ತು ತಂತ್ರಗಾರಿಕೆಯ ಕುರಿತು ಸರಿಯಾದ ಉದಾಹರಣೆಗಳನ್ನು ಮುಂದಿಟ್ಟು ವಿಮರ್ಶಿಸುತ್ತಾರೆ. ಲೇಖಕನ ಹಿನ್ನಲೆ ಮತ್ತು ಪರಿಸರ ಕೃತಿಯ ಗುಣಾಂಶಗಳಲ್ಲಿ ಹೇಗೆ ಒಳಹೊಕ್ಕಿವೆ ಎಂದು ಕೂಡಾ ಅವರು ವಿಶ್ಲೇಷಣೆ ಮಾಡುತ್ತಾರೆ.

ಸಂಶೋಧನೆ ಮತ್ತು ಜಾನಪದ ಅಧ್ಯಯನದ ಹಿನ್ನಲೆಯಲ್ಲಿ ಜನಪರ ಕಾಳಜಿ ಮತ್ತು ಕನ್ನಡ ಭಾಷೆಯ ಕುರಿತು ಭಾವುಕತೆಯನ್ನು ಹೊಂದಿರುವ ಡಾ. ಬಿಳಿಮಲೆಯವರ ವಿಮರ್ಶಾ ಲೇಖನಗಳು ಸಾಹಿತ್ಯದ ಗಂಭೀರ ವಿದ್ಯಾರ್ಥಿಗಳಿಗೆ ಹೇಗೆ ಬಹಳ ಉಪಯುಕ್ತವಾಗಲಿವೆಯೋ ಅದೇ ರೀತಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಹೊರನೋಟವನ್ನು ಅರಿಯುವವರಿಗೂ ದಾರಿದೀಪವಾಗಲಿದೆ. ವಿವಿಧ ಕಾಲಘಟ್ಟಗಳಲ್ಲಿ ಬರೆದಿರುವ ಈ ಸಂಕಲನದ ಬರಹಗಳು ಬರೆದಂತಹ ಅಥವಾ ಪ್ರಕಟವಾದಂತಹ ಸಮಯವನ್ನು ಕೃತಿಯಲ್ಲಿ ನಮೂದಿಸಿದ್ದರೆ, ಲೇಖನಗಳನ್ನು ವಿಮರ್ಶಾತ್ಮಕವಾಗಿ ಓದುವಾಗ ಆ ಕಾಲಘಟ್ಟದ ಪರಿಸ್ಥಿತಿಯ ಹಿನ್ನಲೆಯನ್ನು ಅರ್ಥೈಸಿ ಬರಹಗಳ ಆಯಾಮಗಳನ್ನು ಕಂಡುಕೊಳ್ಳಬಹುದಿತ್ತು.

'ಮೆಲುದನಿ'ಯನ್ನು ಪ್ರಕಟಿಸಿದ ಸವಿತಾ ಯಾಜಿ ಅವರು ಡಾ. ಬಿಳಿಮಲೆಯವರ ಲೇಖನಗಳ ಕುರಿತು 'ಹಿರಿಯ-ಕಿರಿಯ ಬರಹಗಾರರು ಎಂಬ ಭೇದವಿಲ್ಲದೆ ಎಲ್ಲರನ್ನೂ ಓದುವ, ಓದಿದುದರ ಬಗೆಗೆ ನಾಲ್ಕು ಮಾತು ಬರೆದು ಗುಣಾವಗುಣಗಳನ್ನು ನಿರ್ದಾಕ್ಷಿಣ್ಯವಾಗಿ ಹೇಳುವ ಪ್ರಾಮಾಣಿಕ ನಿಷ್ಠೆ ಈ ಲೇಖನಗಳಲ್ಲಿ ವ್ಯಕ್ತವಾಗಿದೆ' ಎಂದು ಹೇಳುತ್ತಾರೆ. ಮೆಲುದನಿಯಲ್ಲಿ 42 ಲೇಖನಗಳಿದ್ದು, ಅವುಗಳನ್ನು ಬಿಡಿಬಿಡಿಯಾಗಿ, ಒಂದಕ್ಕೊಂದು ತಾಳೆ ಇಲ್ಲದೆಯೂ ಓದಬಹುದು. ಜತೆಗೆ, ವೈಚಾರಿಕ ಲೇಖನಗಳು, ಮಹತ್ವದ ಕೃತಿಗಳ ಕುರಿತಾದ ಗಂಭೀರವಾದ ಚಿಂತನೆಗಳು ಮತ್ತು ಹೊಸ ಬರಹಗಾರರು ಬರೆಯುತ್ತಿರುವ ರೀತಿಗಳ ಕುರಿತು ಒಂದೆಡೆ ಅಧ್ಯಯನ ಮಾಡಲು ಸಾಧ್ಯವಾಗುವಂತಹ ಕೃತಿಯಿದು. ಅಬ್ಬರದ ವಿಮರ್ಶಾ ಪರಿಸರದಲ್ಲಿ ಇದು ಮೆಲುದನಿಯೆಂದು ಲೇಖಕರು ಹೇಳಿಕೊಂಡರೂ, ಕನ್ನಡ ಸಾಹಿತ್ಯದ ಓದುಗರಿಗೆ ಇದೊಂದು ಸ್ಪಷ್ಟವಾದ ದನಿಯನ್ನು ನೀಡುತ್ತದೆ. ಅ

***ಬಾಲಕೃಷ್ಣ ನಾಯ್ಕ್ ಡಿ.***

## ಪತಿ-ಪತ್ನಿ ಪ್ರೀತಿ-ಪ್ರೇಮ

ತಾರೆ ಚಂದಿರನಂತಿರುವ ಬಾನಂತೆ ನದಿ
ಸಾಗರಗಳಿರುವ ಧರಣಿಯಂತೆ
ಬಾನು ಬಯಲು ಸೇರುವ ದಿಗಂತದಂತೆ
ಇರಬೇಕು ಇರಬೇಕು ಪತಿ ಪತ್ನಿಯರ ಮನಸು
ಇವರಂತೆ

ಕಡಲೆಂಬ ಪುರುಷನಿಗೆ ಅಲೆಗಳೆಂಬ ಪ್ರಕೃತಿಯಂತೆ
ಮೇಲಿರುವಷ್ಟೊತ್ತು ಏರಿಳಿಯುವ ಅಲೆಗಳನು
ದೂರದ ತೀರಕ್ಕಟ್ಟುವ ಕಡಲಂತೆ
ಆಳಕ್ಕಿಳಿದಂತೆಲ್ಲ ಕಡಲು ಅಲೆಗಳು ಮಿಳಿತವಾಗಿ
ಅನಂತವಾದ ಶಾಂತತೆ ಮತ್ತು ಧೃಡತೆ ಇರುವಂತೆ
ಇರಬೇಕು ಇರಬೇಕು ಪತಿ ಪತ್ನಿಯರ ಸಾನ್ನಿಧ್ಯ
ಇವರಂತೆ

ಹೂವಿನಲ್ಲಿರುವ ಸುಮಧುರ ಸುಗಂಧದಂತೆ
ಗಾಳಿಯಲ್ಲಿರುವ ಹಿತವಾದ ಲಾಸ್ಯದಂತೆ
ಸೂರ್ಯಕಿರಣಗಳಲ್ಲಿರುವ ಬಿಸಿ ಬಂಧನದಂತೆ
ಅನಂತ ಸೃಷ್ಟಿಯಲ್ಲಿರುವ ಪ್ರೇಮಮೂರ್ತಿ
ಭಗವಂತನಂತೆ
ಇರಬೇಕು ಇರಬೇಕು ಪತಿ ಪತ್ನಿಯರ ಜೀವನ
ಹಾಲು ಜೇನಿನ ಸಮ್ಮಿಶ್ರದಂತೆ

ಏನೆಲ್ಲ ಬರಬಹುದು ಹ್ಯಾಗೆಲ್ಲ ಇರಬಹುದು
ಎಷ್ಟು ತಂದರೂ ಸಾಲದಿರಬಹುದು
ಸಾಲವಾಗಬಹುದು
ಬಾಳಿ ಬದುಕುವ ಬಂಡಿಯನು ಸರಿಯಾಗಿ
ಎಳೆಯಲೇ ಬೇಕು
ಇರಬೇಕು ಇರಬೇಕು ನಿರಂತರ ಸಹಬಾಳ್ವೆಯ
ಬದುಕು

*ನರೇಂದ್ರ ಎ.*

## ಭರದ ಜೀವನ

ಆ ದಿನಗಳು ಕಳೆದ ಆ ಕ್ಷಣಗಳು
ಜೀವನದಲಿ ನಲಿವುಗಳ ಭಂಡಾರ
ಸುಖ ದುಃಖದ ಆಗರದ ಸಾರ
ಈ ಜೀವನದ ಸಾಗರಲಿ ಹುದುಗಿಹುದು
ಹುದುಗಿಹುದ ನೋಡಲೊರಟರೆ
ಸದ್ದು ಗದ್ದಲದಿಂದ ತುಂಬಿದ
ಯಾವುದಕ್ಕೂ, ಯಾರಿಗೂ ವೇಳೆಯಿಲ್ಲವೆಂದು
ಉಸಿರುಗಟ್ಟಿ ನಾಗಾಲೋಟದಿಂದ
ಎಲ್ಲರಿಗಿಂತ ಮುಂದಿರಬೇಕೆಂದು
ಓಡುತ್ತಿರುವ, ಈ ಭರದ ಜನರ
ಗಲಾಟೆಯಲ್ಲಿ ನಾನೆಲ್ಲಿ ಹಿಂದೆ
ಬೀಳುವೆನೋ ಎಂಬ ಭಯದಲ್ಲಿ
ವಿಧಿ ಇಲ್ಲದೆ ಎದ್ದು ಬಿದ್ದು ಓಡುತ್ತಿರುವೆ
ದಿನ ಬೆಳಗಾದರೊಂದು ಜಂಜಾಟದ
ಈ ಒತ್ತಡದ ಬದುಕಿನಲಿ
ನೆಮ್ಮದಿ, ಶಾಂತಿಯಿಂದ ಕುಳಿತು
ಕಳೆದ ಜೀವನದ ಕಷ್ಟ ಕೋಟಲೆ,
ಸುಖ ದುಃಖ, ಸಿಹಿ ಕಹಿ ಬೆರೆತ
ಆ ಮಧುರ ಕ್ಷಣಗಳ ನೆನಪನ್ನು
ಆಸ್ವಾದಿಸಲು ಸಾಧ್ಯವೆ?

*ಎಸ್.ಸಿ. ಹೇಮಲತ*

## ದೇವರ ಹುಡುಕಾಟ

ಮಥುರಾದ ಕೃಷ್ಣನಿಗೆ ಭಕ್ತರ ಕಾಟದ ನಡುವೆ
ಗೋಪಿಕೆಯರ ಭೇಟಿಗೆ ಸಮಯ ಸಿಗಲಿಲ್ಲ,
ಅಯೋಧ್ಯೆಯ ರಾಮನಿಗೆ
ಮಂದಿರ ಕಟ್ಟುವ ಜನಗಳ ನಡುವೆ
ಏಕಾಂತ ದೊರೆಯಲಿಲ್ಲ.

ಇಬ್ಬರೂ ಭೇಟಿಯಾದರೊಮ್ಮೆ
ನಿಡುಸುಯ್ದು ಕೊಂಡರು
ರಾಮ ಹೇಳಿದ,
ನಡೆ ಮಥುರಾಕ್ಕೆ ಹೋಗೋಣ,
ಹಾದಿಯಲಿ ಸಿಗುವ ಗೋವರ್ಧನ ಗಿರಿಯ
ಬುಡದಲಿ ತಣ್ಣಗೆ ಕುಳಿತಿರಬಹುದು?

ಗೋವಿಂದ ಕಸಿವಿಸಿಕೊಂಡ,
ಪರ್ವತದ ಬುಡದಲಿ ಕುಳಿತರೆ
ಕೊಳನೂದಲೇಬೇಕು,
ಊದಿದರೆ ಕೊಳಲು ಗೋವುಗಳ ಹಿಂಡು,
ಮತ್ತದೇ ಕತೆ,
ನಡೆ, ಗಂಗಾ ತಟದಲಿ ವಿಹರಿಸೋಣ.
ಗುಹನ ದೋಣಿಯಲಿ ರಂಧ್ರಗಳಿಲ್ಲ,

ಈಗ ಬೆಚ್ಚುವ ಸರದಿ ರಾಘವನದು,
ಗಂಗೆಯ ತುಂಬಾ ಕೊಳಕು,
ದಪ್ಪ ನೀರಿನಲಿ ಚಲಿಸದ ಓಡ

ಕಂಗಾಲಾದ ದೇವರಿಬ್ಬರಿಗೂ
ಈಗ ಮುಗಿವಿಲ್ಲದ ಹುಡುಕಾಟದ ಕೆಲಸ

*ಡಾ. ಪುರುಷೋತ್ತಮ ಬಿಳಿಮಲೆ*



# ಪ್ರಧಾನ ಮಂತ್ರಿಗೆ ಬಸವೇಶ್ವರರ ಭಾವಚಿತ್ರ ಸಲ್ಲಿಕೆ



ಮಹಾ ಮಾನವತಾವಾದಿ ಜಗದ್ಗುರು ಶ್ರೀ ಬಸವೇಶ್ವರ ಅವರ ಜಯಂತಿ ಅಂಗವಾಗಿ ಬಸವೇಶ್ವರರ ಭಾವಚಿತ್ರವನ್ನು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರಿಗೆ ಸಂಸತ್ ಕಚೇರಿಯಲ್ಲಿ ಕರ್ನಾಟಕ ರಾಜ್ಯದ ಕೇಂದ್ರ ಸಚಿವರ ನೇತೃತ್ವದ ಸಂಸದರ ನಿಯೋಗವು ಸಲ್ಲಿಸಿತು.

ಸಂಸತ್ ಆವರಣದಲ್ಲಿರುವ ಶ್ರೀ ಬಸವೇಶ್ವರ ಪ್ರತಿಮೆಗೆ ಕೇಂದ್ರ ರಸಾಯನ ಮತ್ತು ರಸಗೊಬ್ಬರ ಖಾತೆ ಸಚಿವರಾದ ಶ್ರೀ ಅನಂತ ಕುಮಾರ್, ಕಾನೂನು ಸಚಿವರಾದ ಶ್ರೀ ಸದಾನಂದ ಗೌಡ, ಮಧ್ಯಮ ಕೈಗಾರಿಕೆ ಸಚಿವರಾದ ಶ್ರೀ ಜಿ.ಎಂ. ಸಿದ್ದೇಶ್ವರ ಅವರು ಮಾಲಾರ್ಪಣೆ ಸಲ್ಲಿಸಿ ಗೌರವ ಸಲ್ಲಿಸಿದರು.

ನಿಯೋಗದಲ್ಲಿ ಸಂಸದರಾದ ಶ್ರೀ ಪ್ರಹ್ಲಾದ ಜೋಶಿ, ಶ್ರೀ ಬಿ.ಎಸ್. ಯಡಿಯೂರಪ್ಪ, ಕು. ಶೋಭಾ ಕರಂದ್ಲಾಜೆ, ಶ್ರೀ ಪ್ರತಾಪ ಸಿಂಹ ಶ್ರೀ ಪಿ.ಸಿ. ಗದ್ದಿಗೌಡರ್, ಶ್ರೀ ನಳಿನ ಕುಮಾರ್ ಕಟೀಲು, ಶ್ರೀ ಶಿವಕುಮಾರ್ ಉದಾಸಿ, ಶ್ರೀ ಕರಡಿ ಸಂಗಣ್ಣ, ಶ್ರೀ ಪಿ.ಸಿ. ಮೋಹನ್, ಶ್ರೀ ಸುರೇಶ್ ಅಂಗಡಿ ಮತ್ತಿತರರು ಭಾಗವಹಿಸಿದ್ದರು. ಅ

*ಅಭಿಮತ ವರದಿ*

# ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್

ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ವತಿಯಿಂದ ರಾಮನವಮಿಯನ್ನು ಎಪ್ರಿಲ್ 10ರಂದು ಆಚರಿಸಲಾಯಿತು. ಅಸೋಸಿಯೇಶನ್ ಸದಸ್ಯೆಯರು ರಾಮನ ಕುರಿತಾದ ಹಲವು ಭಕ್ತಿಗೀತೆಗಳನ್ನು ಹಾಡಿದರು. ನಂತರ ಸದಸ್ಯೆಯರು ಮನೆಯಲ್ಲಿ ಮಾಡಿ ತಂದಿದ್ದ ಭಕ್ಷ್ಯ ಭೋಜನದ ಸವಿಯನ್ನುಣ್ಣಲಾಯಿತು.

ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ನಾಟಕದ ಪ್ರಯುಕ್ತ ಲೇಡಿಸ್ ಅಸೋಸಿಯೇಶನ್ ಸದಸ್ಯೆಯರು ಪ್ರಸ್ತುತಪಡಿಸಿದ ಅಜ್ಜಿ ಆಸ್ತಿ ನಾಟಕವನ್ನು ನಿರ್ದೇಶಿಸಿದ ಶ್ರೀ ಟಿ.ಎಂ. ಮೈಲಾರಪ್ಪ ಮತ್ತು ಸಹಕರಿಸಿದ ಶ್ರೀ ದಿಲೀಪ್ ಬಾಪಟ್ ಅವರನ್ನು ಈ ಸಂದರ್ಭದಲ್ಲಿ ಪುಷ್ಪಗುಚ್ಛ ನೀಡಿ ಗೌರವಿಸಲಾಯಿತು. ಅ

*ಎಸ್.ಸಿ. ಹೇಮಲತ*

# ಪ್ರಶಸ್ತಿಗಳು



ದೆಹಲಿ ಕರ್ನಾಟಕ ಸಂಘದ ಮಾಜಿ ಉಪಾಧ್ಯಕ್ಷರಾದ ಶ್ರೀ ಎಸ್.ಜಿ. ಹೆಗಡೆ ಅವರಿಗೆ ಸಹಕಾರಿ ಕ್ಷೇತ್ರದಲ್ಲಿ ಸಲ್ಲಿಸಿದ ವಿಶಿಷ್ಟ ಸೇವೆಗಾಗಿ 2014–15ನೇ ಸಾಲಿನ ಠಾಕೂರ್ ವೇದರಾಮ್ ರಾಷ್ಟ್ರೀಯ ಪುರಸ್ಕಾರ ಲಭಿಸಿದೆ. 2015 ಏಪ್ರಿಲ್ 21ರಂದು ಹಿಮಾಚಲ ಪ್ರದೇಶದ ಕುಲ್ಲುವಿನಲ್ಲಿ ನಡೆದ ಸಮಾರಂಭದಲ್ಲಿ ಎಸ್.ಜಿ. ಹೆಗಡೆ ಅವರನ್ನು ಸನ್ಮಾನಿಸಲಾಯಿತು.



ಬೆಂಗಳೂರಿನ ಅಂಬೇಡ್ಕರ್ ಶತಮಾನೋತ್ಸವ ಸಮಿತಿ ಟ್ರಸ್ಟ್ ನೀಡುವ 'ಬೋಧಿ ವರ್ಧನ' ಪ್ರಶಸ್ತಿಯನ್ನು ದೆಹಲಿಯಲ್ಲಿ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ವಿಶೇಷ ವರದಿಗಾರರಾಗಿರುವ ಶ್ರೀ ಡಿ. ಉಮಾಪತಿಯವರಿಗೆ ನೀಡಲಾಗಿದೆ.

# ಶಾಲನ್ ಮುರಗೋಡರಿಗೆ "ನಾರಿಶಕ್ತಿ" ಪುರಸ್ಕಾರ



ಗಾಂಧಿ ಶಾಂತಿ ಪ್ರತಿಷ್ಠಾನದ ಪ್ರತಿಷ್ಠಿತ "ನಾರಿ ಶಕ್ತಿ" ಪುರಸ್ಕಾರವು ಸಮಾಜ ಸೇವಕಿ, ಕಲಾವಿದೆ ಶಾಲನ್ ಮುರಗೋಡ ಅವರಿಗೆ ಲಭಿಸಿದೆ. ಮಾರ್ಚ್ 7ರಂದು ನಡೆದ ಸಮಾರಂಭವೊಂದರಲ್ಲಿ ಈ ಪುರಸ್ಕಾರವನ್ನು ನೀಡಲಾಯಿತು. ನವದೆಹಲಿಯ ಲಕ್ಷ್ಮೀ ಬಾಯಿ ನಗರದಲ್ಲಿರುವ ಸೀನಿಯರ್ ಸೆಕೆಂಡರಿ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿರುವ ಶಾಲನ್ ಮುರಗೋಡ್ ಅವರು ಪ್ರಸಿದ್ಧ ಮೂರ್ತಿಕಾರರು ಸಹ. ಅವರು ದಕ್ಷಿಣ ದೆಹಲಿಯ ಪರಿಸರದಲ್ಲಿ ಬಹಳಷ್ಟು ಮಂದಿಗೆ ಉಚಿತ ಯೋಗವನ್ನು ಕಳೆದ 14 ವರ್ಷಗಳಿಂದ ಕಲಿಸುತ್ತಿದ್ದಾರೆ. ಜತೆಗೆ ಕುಷ್ಠರೋಗ ಕಾಲನಿಯಲ್ಲಿ ಸಮಾಜ ಸೇವೆಯನ್ನು ಮಾಡುತ್ತಿದ್ದಾರೆ. ಅಂಗವಿಕಲ ಮಕ್ಕಳಿಗೆ ಉಚಿತ ಚಿತ್ರಕಲೆಯನ್ನು ಕೂಡಾ ಕಲಿಸುತ್ತಿದ್ದಾರೆ. ದೆಹಲಿ ಕರ್ನಾಟಕ ಸಂಘ ಸೇರಿದಂತೆ ದೆಹಲಿಯಲ್ಲಿ ಕನ್ನಡ ಪರ ಚಟುವಟಿಕೆಗಳಲ್ಲಿ ಅವರು ಕ್ರಿಯಾಶೀಲರಾಗಿ ಅತ್ಯಪೂರ್ವವಾದ ಕೊಡುಗೆಗಳನ್ನು ನೀಡಿದ್ದಾರೆ. ಅವರ ಪತಿ ಶ್ರೀ ಭೀಮರಾವ್ ಮುರಗೋಡ್ ಅಂತರರಾಷ್ಟ್ರೀಯ ಖ್ಯಾತಿಯ ಚಿತ್ರಕಾರರು. ಅ

*ಸುಮಿತಾನಂದ್ ಮುರಗೋಡ*

# ದೆಹಲಿಯ ಕನ್ನಡಿಗರು ಆಯ್ಕೆ





ದೆಹಲಿ ಸರಕಾರದ ಪ್ರತಿಷ್ಠಿತ ತರಬೇತಿ ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಯ ಪತ್ರಾಂಕಿತ ಅಧಿಕಾರಿಗಳ ಸಂಘದ ಚುನಾವಣೆಯಲ್ಲಿ ದೆಹಲಿ ಕರ್ನಾಟಕ ಸಂಘದ ಸದಸ್ಯರಾದ ಶ್ರೀ ಶಿವರಾಮು ಅವರು ಅಧ್ಯಕ್ಷರಾಗಿ ಜಯಗಳಿಸಿದ್ದಾರೆ. ಇನ್ನೊಬ್ಬ ಸದಸ್ಯರಾದ ಶ್ರೀ ಬಸವರಾಜು (ಜುಪಿಟರ್) ಅವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಅ


# ರಂಗ ವಿನ್ಯಾಸ

ರಂಗದಲ್ಲಿ ಪರದೆ ಸರಿದಾಗ ದೃಶ್ಯಗಳು ಮೂಡುವುದರ ಜತೆಗೆ ಸಂಗೀತದ ಅಲೆಗಳು ಹೊಸದೊಂದು ಸಂಕೇತವನ್ನು ಮೂಡಿಸುವ ಪರಿಸರ ನಿರ್ಮಾಣವಾಗುತ್ತದೆ. ಸಂಗೀತದ ಸಂಕೇತಗಳ ಮೂಲಕ ರಂಗದ ಮೇಲೆ ನಡೆಯುವ ಪ್ರಕ್ರಿಯೆಗಳು ಅರ್ಥಗಳನ್ನು ವ್ಯಕ್ತಪಡಿಸುತ್ತವೆ. ಭಾರತದ ಜಾನಪದ ಸೊಗಡಿನ ಸಂಗೀತದ ಎಳೆಯಲ್ಲಿ ವಿಶ್ವಮಟ್ಟದ ರಂಗ ಚಮತ್ಕಾರವೊಂದು ಮೂಡಿ ಬಂದು ಪ್ರೇಕ್ಷಕನು ರಂಗದ ಮೇಲೆ ನಡೆಯುವ ಸಂಭಾಷಣೆ, ಅಭಿನಯ, ಬೆಳಕಿನ ನೆರಳಿನಾಟವೆಲ್ಲವನ್ನು ಒಂದು ಅನುಭವವನ್ನಾಗಿಸಿಕೊಳ್ಳುತ್ತಾನೆ. ರಂಗಮಂದಿರದಿಂದ ಹೊರ ಬಂದು ಅದೇ ಸಂಗೀತವನ್ನು, ನೆರಳು ಬೆಳಕಿನ ದೃಶ್ಯ ಜಾದೂವನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತಾನೆ. ಇದು ಬಿ.ವಿ. ಕಾರಂತರ ನಾಟಕಗಳ ರೀತಿ.

ರಂಗ ಸಂಗೀತಕ್ಕೆ ಹೊಸ ಭಾಷ್ಯವನ್ನು ಬರೆದು ದೆಹಲಿಯಲ್ಲಿ ಹಿಂದಿ ನಾಟಕ, ಮಕ್ಕಳ ನಾಟಕಗಳನ್ನು ಆಡಿದವರು ಕಾರಂತರು. ಜತೆಗೆ ಗೆಳೆಯರೊಂದಿಗೆ ದೆಹಲಿಯಲ್ಲಿ ಕಟ್ಟಿದ ಕನ್ನಡ ಭಾರತಿಯ ಮೂಲಕ ಕನ್ನಡ ರಂಗ ಪರಂಪರೆಗೆ ಅಪೂರ್ವವಾದ ಕೊಡುಗೆಯನ್ನು ನೀಡಿದ್ದಾರೆ. ದೆಹಲಿಯ ಕನ್ನಡ ರಂಗಭೂಮಿಗೆ ಕಾರಂತರಷ್ಟೇ ಕನ್ನಡ ಭಾರತಿಯೂ ಪ್ರೇರಕಶಕ್ತಿಯಾಗಿದೆ. ಕನ್ನಡ ಭಾರತಿ ನಡೆಸಿದಂತಹ ರಂಗ ಪ್ರಯೋಗಗಳನ್ನು ಮತ್ತೆ ಮಾಡಬೇಕು ಎನ್ನುವ ಹುಮ್ಮಸ್ಸು ಇಲ್ಲಿನ ಪ್ರತಿಯೊಬ್ಬ ರಂಗಕರ್ಮಿಯ ಹೃದಯದಲ್ಲಿದೆ. ದೆಹಲಿ ಕರ್ನಾಟಕ ಸಂಘವು ಎಪ್ರಿಲ್‌ನಲ್ಲಿ ನಡೆಸಿದ ರಂಗ ತರಬೇತಿ ಶಿಬಿರ, ಜತೆಗೆ ಅಲ್ಲಿ ಮೂಡಿಬಂದ ಪ್ರಾಯೋಗಿಕ ನಾಟಕ ದೆಹಲಿಯ ಕನ್ನಡ ರಂಗಭೂಮಿಯ ಹಿರಿಮೆಗೆ ಮತ್ತೊಂದು ಗರಿಯನ್ನಿಟ್ಟಿದೆ. ದೆಹಲಿಯ ಕನ್ನಡ ರಂಗಭೂಮಿಯಲ್ಲಿ ಹೊಸ ಪ್ರಯೋಗಗಳು ಆಗುತ್ತಲೇ ಇವೆ. ಅಭಿನಯ, ರಂಗವಿನ್ಯಾಸಗಳ ಒಟ್ಟಿಗೆ ರಂಗಪ್ರಯೋಗಗಳು ಸಮಾಜದ ಪ್ರಶ್ನೆಗಳನ್ನು ಎತ್ತಿಕೊಂಡು ಹೊಸ ಅರ್ಥಗಳನ್ನು ರೂಪಿಸಬೇಕು. ಜತೆಗೆ ಉತ್ತಮ ಪ್ರೇಕ್ಷಕ ಪರಂಪರೆಯನ್ನು ನಿರ್ಮಿಸುವ ಸವಾಲು ಕೂಡಾ ದೆಹಲಿಯ ರಂಗಾಸಕ್ತರಲ್ಲಿ ಬರಬೇಕು.

ದೆಹಲಿ ಕರ್ನಾಟಕ ಸಂಘ ಈ ವರ್ಷದಿಂದ ನೀಡಿದ ಕನ್ನಡ ಭಾರತಿ ಪ್ರಶಸ್ತಿಯು ಮುಂದಿನ ವರ್ಷಗಳಲ್ಲಿ ದೆಹಲಿಯಲ್ಲಿ ಕನ್ನಡ ರಂಗಭೂಮಿಯಲ್ಲಿ ಹೊಸ ಪ್ರಯೋಗಗಳನ್ನು ಮಾಡಲು ಸ್ಫೂರ್ತಿಯಾಗಲಿ.

*ಬಾಲಕೃಷ್ಣ ನಾಯ್ಕ್ ಡಿ.*





# ದೆಹಲಿಯನ್ನು ಬೆರಗುಗೊಳಿಸಿದ ಹಂಪಿಯ ಚಿತ್ರಕಲೆ



ವರ್ಲ್ಡ್ ಹೆರಿಟೇಜ್ ದಿನದ (ಏಪ್ರಿಲ್ 18) ಅಂಗವಾಗಿ ಕಲಾವಿದ ಗಣೇಶ ದೊಡ್ಡಮನಿಯವರ ಹಂಪಿಯ 45 ಚಿತ್ರಗಳುಳ್ಳ ಕಲಾಪ್ರದರ್ಶನವು ದೆಹಲಿ ಮೆಟ್ರೋಪಾಲಿಟನ್ ಹೋಟೆಲ್‌ನ ಆರ್ಟ್ಸ್ ಸ್ಪೆಸ್ ಗ್ಯಾಲರಿಯಲ್ಲಿ ಇದೇ ಎಪ್ರಿಲ್ 18ರಿಂದ ಮೇ 20ರವರೆಗೆ ನಡೆಯಿತು.

ಚಿತ್ರಕಲಾಕೃತಿಗಳನ್ನು ವೀಕ್ಷಿಸಿದ ಪದ್ಮಶ್ರೀ ರಾಮ ವಿ. ಸುತಾರ್ ಅವರು "ಹಂಪಿಯನ್ನೇ ದೆಹಲಿಗೆ ತಂದಂತಾಗಿದೆ" ಎಂದರು. ನಾವೆಲ್ಲ "ವಂಡರ್ ಲ್ಯಾಂಡ್" ನಲ್ಲಿದ್ದೇವೆ ಎಂಬ ತಮ್ಮ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದರು.

ಹರಿಹರ ಬುಕ್ಕರಿಂದ ಸ್ಥಾಪಿತವಾದ ಗತವೈಭವದ ನಾಡಾದ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಹಂಪಿ ತನ್ನದೇ ಆದ ವೈಶಿಷ್ಟ್ಯತೆಯನ್ನು ಮೆರೆದಿತ್ತು. ಅಂದು ನಿರ್ಮಾಣಗೊಂಡ ದೇವಾಲಯಗಳು ಇಂದಿಗೂ ನಮ್ಮನ್ನು ತನ್ನ ಕಲಾಕೃತಿ, ಕಲಾವೈಭವದಿಂದ ಕೈಬೀಸಿ ಕರೆಯುವಂತೆ ಕಂಗೊಳಿಸುತ್ತಲಿವೆ.

ಕಲಾವಿದ ಗಣೇಶ ದೊಡ್ಡಮನಿಯವರು ತಾವು ಹಂಪಿಯಲ್ಲಿ ಸವಿದ ಕಲಾ ಸಿರಿಸಂಪತ್ತಿನ ಸೊಬಗನ್ನು ತಮ್ಮ ಕಲಾಕುಂಚದ ಬಣ್ಣಗಳ ಮೂಲಕ ಅಭಿವ್ಯಕ್ತಗೊಳಿಸಿದ್ದಾರೆ.

ಹಂಪಿಯ ವಿರೂಪಾಕ್ಷ ದೇವಾಲಯ, ವಿಜಯ ವಿಠ್ಠಲ ದೇವಾಲಯ, ಕಲ್ಲಿನ ರಥ, ಸಪ್ತಸ್ವರಗಳು ಹೊರಹೊಮ್ಮಿಸುವ ಸಂಗೀತದ ಕಂಬಗಳು ಇತ್ಯಾದಿಗಳ ಮೂಲಕ ನೇಸರನು ತನ್ನ ಹೊಂಬಣ್ಣದ ಕಿರಣಗಳಿಂದ ಶಿಲ್ಪಕಲಾಕೃತಿಯ ಮೇಲೆ ಹೇಗೆ ನಾಟ್ಯವಾಡಿದ್ದಾನೆ ಎಂಬುದನ್ನು ತಮ್ಮ ತೈಲವರ್ಣಗಳ ಮೂಲಕ ಕಲಾಕಾರ ಪ್ರತಿಬಿಂಬಿಸಿದ್ದಾರೆ.

ಗಣೇಶ, ಬಸವಣ್ಣ, ಗರುಡ, ಇವೆಲ್ಲವೂ ದೇವಾಲಯದ ಶಿಲ್ಪಕಲಾಕೃತಿಗಳೊಂದಿಗೆ ಬೆರೆತು ತಮ್ಮದೇ ಆದ ಕಲಾ ಸೊಬಗನ್ನು ಕಂಗೊಳಿಸುವಂತೆ ಕಲಾವಿದ ಚಿತ್ರಿಸಿರುವುದು ನೋಡುಗರ ಕಣ್ಣಿಗೆ ಹಬ್ಬವನ್ನುಂಟು ಮಾಡುವಂತಿದೆ.

ಚಿತ್ರಕಲಾರ ಕೆಲವು ತೈಲವರ್ಣ ಚಿತ್ರಗಳನ್ನು ಉದ್ದನೆಯ ಆಕಾರದ ಮೂಲಕ ಚಿತ್ರಿಸಿರುವುದು ಸೂರ್ಯ, ಚಂದ್ರ, ಆಕಾಶ, ಗಿಡಮರ, ಬೆಟ್ಟ, ಕಲ್ಲುಬಂಡೆ ಒಟ್ಟಾರೆ ಸುತ್ತಲಿನ ನಿಸರ್ಗದ ಸೊಬಗನ್ನು ತಮ್ಮ ಚಿತ್ರಕಲೆಯ ಮೂಲಕ ಸವಿಯುವಂತೆ ಮಾಡಿದ್ದಾರೆ.

ನಾಡಿನ ಸಂಪದ್ಭರಿತವಾದ ಕಲೆ, ಸಂಸ್ಕೃತಿಯನ್ನು ಕಲಾಕಾರ ಗಣೇಶ ದೊಡ್ಡಮನಿಯವರು ತೈಲವರ್ಣದ ಮೂಲಕ ಕುಂಚದಿಂದ ನಾಟ್ಯವಾಡಿಸಿದ್ದಾರೆ.

ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದ ಕಲಾವೀಕ್ಷಕರು, ವಿಮರ್ಶಕರು ಮತ್ತು ಕಲಾವಿದರು ಈ ಕನ್ನಡ ಕಲಾವಿದನ ಚಿತ್ರಕಲೆಯನ್ನು ಪ್ರಶಂಸಿದರು. ಖ್ಯಾತ ಕಲಾವಿದ ಶ್ರೀ ಭೀಮರಾವ್ ಮುರಗೋಡ, ಶ್ರೀಮತಿ ಶಾಲನ್ ಮುರಗೋಡ, ಪ್ರಾಂಜಲ್, ಸಿದ್ಧಾರ್ಥ ಮೊದಲಾದವರು ಇದ್ದರು. ಅ

**(ಚಿತ್ರಗಳು: ಆನಂದ ಮುರಗೋಡ)**

***ಅಭಿಮತ ವರದಿ***


**SAUJANYA** PRINTING PRESS

A HOUSE OF QUALITY PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ

ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್

ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.

ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

C-95, Okhla Industrial Area Phase-I, New Delhi – 110 020

E-MAIL: saujanyapp2010@gmail.com / hpgp2006@gmail.com

PHONE: 011-40520770 MOBILE:9811104398,,9811604398

Delhi Karnataka Sangha Abhimatha Monthly,
May-2015, Vol. No.25, Issue No.6, Price Rs.1/- RNI Regn. No. 53405/91, DL-SW-1/4016/13-15
Printout Date : May 8th / 9th, Postal Date :10th / 11th, Total Pages-20
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.


# ALWAYS AHEAD TO EXCEL !

**Enjoy the full range of our banking services**




**Committed to offer you 100% satisfaction with our banking services.**

Step into your nearest Karnataka Bank branch for details.

Karnataka Bank Ltd.
Your Family Bank. Across India.

Regd. & Head Office: Mangalore - 575 002 E-mail: info@ktkbank.com Visit us at: www.karnatakabank.com